◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

NEED 24 NEWS
हर ख़बर, हर शहर

ನೀಡ್ 24 ನ್ಯೂಸ್

ಪ್ರತಿ ಸುದ್ದಿ, ಪ್ರತಿ ನಗರ

◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

DIGITAL E-PAPER

PRGI APPLICATION UNDER PROCESS
Application No. T/GJ/2026/0619/2304/1577

GST
GSTIN 24CINPG0564Q1ZT

UDYAM REGISTERED
UDYAM-GJ-14-0003714

◆ DIGITAL NEWS NETWORK ◆
ಭಾರತದ ವಿಶ್ವಾಸಾರ್ಹ ಬಹುಭಾಷಾ ಡಿಜಿಟಲ್ ನ್ಯೂಸ್ ನೆಟ್‌ವರ್ಕ್
11+ Languages | 24×7 Live | e-Paper Daily

ನಮ್ಮ App ಡೌನ್‌ಲೋಡ್ ಮಾಡಿ
Download on the App Store
GET IT ON Google Play

www.need24.digital
info@need24.in
+91 98700 06472
FOLLOW US:

तेज़ | सटीक | निष्पक्ष | जनहित में | सच की आवाज़ | जन-जन की आवाज़ | निडर पत्रकारिता

AGRICULTURE

ಬಂಗಾರಪೇಟೆ ತಾಲ್ಲೂಕಿನ ಪೋಲೆನಹಳ್ಳಿ ಗ್ರಾಮದಲ್ಲಿ ಕಿಡಿಗೇಡಿಗಳಿಂದ 3 ಎಕರೆ ಟಮೋಟೊ ಬೆಳೆ ನಾಶ, ನಷ್ಟ 15 ಲಕ್ಷ



ಬಂಗಾರಪೇಟೆ ತಾಲ್ಲೂಕಿನ ಪೋಲೆನಹಳ್ಳಿ ಗ್ರಾಮದಲ್ಲಿ ರಾತ್ರಿಯ ಸಮಯದಲ್ಲಿ ಕಿಡಿಗೇಡಿಗಳು ಟಮೋಟೊ ಬೆಳೆವನ್ನು ಹಾನಿಗೊಳಿಸಿದರು. ಸ್ಥಳೀಯ ರೈತರು 3 ಎಕರೆ ಟಮೋಟೊ ನೆಟ್ಟಿದ್ದು, ಒಟ್ಟು ಸುಮಾರು 15 ಲಕ್ಷ ರೂಪಾಯಿ ಹಾನಿ ಆಗಿದೆ ಎಂದು ತಿಳಿಸಿದ್ದಾರೆ. ರೈತರು ಕಿಡಿಗೇಡಿಗಳಿಗೆ ಕಾನೂನುಬದ್ಧವಾಗಿ ತಕ್ಕ ಶಿಕ್ಷೆ ನೀಡುವಂತೆ ಸಂಬಂಧಿತ ಅಧಿಕಾರಿಗಳನ್ನು ವಿನಂತಿಸಿದ್ದಾರೆ. ಸ್ಥಳೀಯ ಆಡಳಿತ ಮತ್ತು ಕಾಡು ಪ್ರಾಣಿಗಳ ಸಂರಕ್ಷಣಾ ಇಲಾಖೆ ಈ ಘಟನೆಯನ್ನು ತನಿಖೆಗಾಗಿ ತೆಗೆದುಕೊಂಡು, ಭವಿಷ್ಯದಲ್ಲಿ ಇಂತಹ ಹಾನಿ ತಡೆಯುವ ಕ್ರಮಗಳನ್ನು ಪರಿಗಣಿಸುತ್ತಿದೆ.

— ಶಿವಪ್ಪ ಬಂಗಾರಪೇಟೆ

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರು ಹಾಗೂ ಸದಸ್ಯರನ್ನು ಸನ್ಮಾನಿಸಿ ಶುಭ ಹಾರೈಸಿದ ರವಿ ಬೋಸರಾಜ



ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಶ್ರೀ ರುದ್ರಪ್ಪ ಅಂಗಡಿ ಹಾಗೂ ನೂತನ ಸದಸ್ಯರಾದ ಶ್ರೀ ಡಿ. ಗೋವಿಂದಪ್ಪ, ಶ್ರೀ ಕೆ. ರಾಮು ತಾಂಡ, ಶ್ರೀ ಮಿಜಾರ್ ಮೊಹಮ್ಮದ್ ಫಸೀಲಲ್ಲಾ ಮತ್ತು ಶ್ರೀಮತಿ ಗಾಯತ್ರಿ ಜಿ. ಅವರನ್ನು ಕಾಂಗ್ರೆಸ್ ಪಕ್ಷದ ಯುವ ಮುಖಂಡ ರವಿ ಬೋಸರಾಜ ಅವರು ಸನ್ಮಾನಿಸಿ, ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ನಗರದ ಸಮಗ್ರ ಅಭಿವೃದ್ಧಿಗೆ ಹೊಸ ದಿಕ್ಕು ಮತ್ತು ವೇಗ ನೀಡುವ ನಿಟ್ಟಿನಲ್ಲಿ ನೂತನ ಅಧ್ಯಕ್ಷರು ಹಾಗೂ ಸದಸ್ಯರು ಸಮನ್ವಯದಿಂದ ಕಾರ್ಯನಿರ್ವಹಿಸಿ, ಜನರ ಆಶೋತ್ತರಗಳಿಗೆ ಸ್ಪಂದಿಸುವ ಜನಪರ ಕಾರ್ಯಗಳನ್ನು ಕೈಗೊಳ್ಳಲಿ. ರಾಯಚೂರು ನಗರವನ್ನು ಸುಸಜ್ಜಿತ ಹಾಗೂ ಅಭಿವೃದ್ಧಿ ಹೊಂದಿದ ನಗರವನ್ನಾಗಿ ರೂಪಿಸುವಲ್ಲಿ ತಮ್ಮೆಲ್ಲರ ಪ್ರಯತ್ನಗಳು ಯಶಸ್ವಿಯಾಗಲಿ ಎಂದು ಶುಭ ಕೋರಿದರು.

— Ningappa

ಕ್ಲಸ್ಟರ್ ಕಿಚನ್ ಸೆಂಟರ್ ಸ್ಥಾಪಿಸುವುದಿಲ್ಲ...!



ಕ್ಲಸ್ಟರ್ ಕಿಚನ್ ಸೆಂಟರ್ ಸ್ಥಾಪಿಸುವುದಿಲ್ಲ...!

ಬೆಂಗಳೂರು: ರಾಜ್ಯ ಅಕ್ಷರದಾಸೋಹ ಬಿಸಿಯೂಟ ತಯಾರಕರ ಯೂನಿಯನ್‌ನ ಗೌರವಾಧ್ಯಕ್ಷ ಎಸ್. ಬಾಲನ್ ಅವರ ನೇತೃತ್ವದ ನಿಯೋಗ ಇಂದು ಬೆಂಗಳೂರಿನ ಗೃಹ ಕಚೇರಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಭೇಟಿಯಾಗಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಿಕೊಂಡಿತು. ಈ ಸಂದರ್ಭದಲ್ಲಿ ಬಿಸಿಯೂಟ ತಯಾರಕರ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು.

ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1ರಿಂದ 10ನೇ ತರಗತಿವರೆಗಿನ ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಯಾವುದೇ ಕಾರಣಕ್ಕೂ ಕ್ಲಸ್ಟರ್ ಕಿಚನ್ ಸೆಂಟರ್‌ಗಳನ್ನು (ಕೇಂದ್ರೀಕೃತ ಅಡುಗೆ ಕೇಂದ್ರ) ಸ್ಥಾಪಿಸುವುದಿಲ್ಲ. ಈ ಬಗ್ಗೆ ಬಿಸಿಯೂಟ ನೌಕರರು ಆತಂಕಪಡುವ ಅಗತ್ಯವಿಲ್ಲ ಎಂದು ಈ ಸಂದರ್ಭದಲ್ಲಿ ಸಚಿವ ಮಧು ಬಂಗಾರಪ್ಪ ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ.

ವೇತನ ಹೆಚ್ಚಳದ ಕುರಿತು ನಿಯೋಗ ಮಾಡಿಕೊಂಡ ಮನವಿಯ ಕುರಿತು ಪ್ರತಿಕ್ರಿಯಿಸಿ, ಈ ವಿಷಯದಲ್ಲಿ ನಾನೊಬ್ಬನೇ ತೀರ್ಮಾನಿಸಲು ಸಾಧ್ಯವಿಲ್ಲ. ಈ ಕುರಿತು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಖಂಡಿತವಾಗಿಯೂ ಚರ್ಚಿಸಿ, ಸಾಧ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಬಿಸಿಯೂಟ ನೀಡುವ 'ಪಿಎಂ ಪೋಷಣ್' (PM POSHAN - ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್) ಎಂಬ ಈ ಯೋಜನೆ ಕೇವಲ ರಾಜ್ಯ ಸರ್ಕಾರದ ಯೋಜನೆಯಲ್ಲ. ಕೇಂದ್ರ ಸರ್ಕಾರವೂ ಇದಕ್ಕೆ ಅನುದಾನ ನೀಡುತ್ತದೆ. ಹೀಗಾಗಿ ನಿಮ್ಮ ಬೇಡಿಕೆಗಳ ಈಡೇರಿಕೆಗೆ ಕೇಂದ್ರ ಸರ್ಕಾರದ ಮೇಲೆಯೂ ಒತ್ತಡ ಹೇರಬೇಕು ಎಂದು ನಿಯೋಗಕ್ಕೆ ಸಲಹೆ ನೀಡಲಾಯಿತು.

ಮಕ್ಕಳಿಗೆ ಪೌಷ್ಟಿಕವಾದ ಆಹಾರ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಇದರಲ್ಲಿ ರಾಜಿಯ ಮಾತೇ ಇಲ್ಲ. ಒಂದು ವೇಳೆ ಕಳಪೆ ಗುಣಮಟ್ಟದ ಆಹಾರ ಧಾನ್ಯಗಳನ್ನು ಒದಗಿಸುತ್ತಿರುವುದು ಕಂಡು ಬಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕೆ ಬಿಸಿಯೂಟ ತಯಾರಕರ ಸಹಕಾರವೂ ಅಗತ್ಯ ಎಂದು ತಿಳಿಸಿದೆ.

ಶಾಸಕ ಮಾನಪ್ಪ ವಜ್ಜಲ ಅವರ ನೇತೃತ್ವದಲ್ಲಿ ತ್ರೈಮಾಸಿಕ ಕೆಡಿಪಿ ಸಭೆ



ಲಿಂಗಸುಗೂರ: ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಇಂದು ಶಾಸಕ ಮಾನಪ್ಪ ವಜ್ಜಲ ಅವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆ.ಡಿ.ಪಿ. ಸಭೆ ನಡೆಸಲಾಯಿತು.

ಈ ವೇಳೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ, ಅಭಿವೃದ್ಧಿ ಕಾಮಗಾರಿಗಳ ಸ್ಥಿತಿಗತಿ ಹಾಗೂ ಸಾರ್ವಜನಿಕರ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ನಿಗದಿತ ಗುರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಾಧಿಕಾರಿ ಶ್ರೀ ವಿಜಯಶಂಕರ್,ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಉಮೇಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

— Ningappa

ಆಶಾ ಕಾರ್ಯಕರ್ತೆ ಯಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಎಂಟು ದಿನಗಳಿಂದ ಹಗಲು-ರಾತ್ರಿ ಪ್ರತಿಭಟನೆ; ಮುಖ್ಯಮಂತ್ರಿ ಸ್ಥಳಕ್ಕೆ ಭೇಟಿ ನೀಡಿ ಬೇಡಿಕೆ ಈಡೇರಿಸಲಿ



ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ಆಶಾ ಕಾರ್ಯಕರ್ತೆಯರ ವೇತನ ₹15 ಸಾವಿರಕ್ಕೆ ಹೆಚ್ಚಿಸಿ: ಹನುಮಂತಪ್ಪ ಮನ್ನಾಪುರಿ ಆಗ್ರಹ

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಎಂಟು ದಿನಗಳಿಂದ ಹಗಲು-ರಾತ್ರಿ ಪ್ರತಿಭಟನೆ; ಮುಖ್ಯಮಂತ್ರಿ ಸ್ಥಳಕ್ಕೆ ಭೇಟಿ ನೀಡಿ ಬೇಡಿಕೆ ಈಡೇರಿಸಲಿ

ಜಾಲಹಳ್ಳಿ, ನ. 23: ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನವೆಂಬರ್ 17ರಿಂದ ಆಶಾ ಕಾರ್ಯಕರ್ತೆಯರು ತಮ್ಮ ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಚಳಿ, ಗಾಳಿ, ಮಳೆಯನ್ನೂ ಲೆಕ್ಕಿಸದೆ ತಮ್ಮ ಚಿಕ್ಕ ಮಕ್ಕಳೊಂದಿಗೆ ಹಗಲು-ರಾತ್ರಿ ನಿರಂತರ ಪ್ರತಿಭಟನೆ ನಡೆಸುತ್ತಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿರುವ ಸಾವಿರಾರು ಆಶಾ ಕಾರ್ಯಕರ್ತೆಯರು ಎಂಟು ದಿನಗಳಿಂದ ಹೋರಾಟ ಮುಂದುವರಿಸಿದ್ದಾರೆ.

ಪ್ರಸ್ತುತ ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರದಿಂದ ತಿಂಗಳಿಗೆ ₹5 ಸಾವಿರ ಹಾಗೂ ಕೇಂದ್ರ ಸರ್ಕಾರದಿಂದ ₹2 ಸಾವಿರ ಸೇರಿದಂತೆ ಒಟ್ಟು ₹7 ಸಾವಿರ ಗೌರವಧನ ದೊರೆಯುತ್ತಿದೆ. ದಿನನಿತ್ಯ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಕೇವಲ ₹7 ಸಾವಿರದಲ್ಲಿ ಕುಟುಂಬ ನಿರ್ವಹಣೆ ಮಾಡುವುದು ಕಷ್ಟಕರವಾಗಿದೆ. ಆದ್ದರಿಂದ ಕನಿಷ್ಠ ₹15 ಸಾವಿರ ಮಾಸಿಕ ವೇತನ ನೀಡಬೇಕು ಎಂಬುದು ಅವರ ಪ್ರಮುಖ ಬೇಡಿಕೆಯಾಗಿದೆ ಎಂದು ಎಂ.ಆರ್.ಎಚ್.ಎಸ್. ರಾಯಚೂರು ಜಿಲ್ಲಾ ಅಧ್ಯಕ್ಷ ಹನುಮಂತಪ್ಪ ಮನ್ನಾಪುರಿ ತಿಳಿಸಿದ್ದಾರೆ.

ಇದಲ್ಲದೆ, ಪ್ರತಿಭಟನಾ ಸ್ಥಳದಲ್ಲಿ ಮಹಿಳೆಯರಿಗೆ ಬಟ್ಟೆ ಬದಲಾಯಿಸಲು, ತೊಳೆಯಲು ಹಾಗೂ ಶೌಚಾಲಯ ಬಳಸಲು ಸಮರ್ಪಕ ವ್ಯವಸ್ಥೆ ಇಲ್ಲದಿರುವುದು ತೀವ್ರ ತೊಂದರೆಯಾಗಿದೆ. ಸುಮಾರು 40 ಸಾವಿರ ಆಶಾ ಕಾರ್ಯಕರ್ತೆಯರ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ತಮ್ಮ ಗಂಡಂದಿರು ಹಾಗೂ ಮಕ್ಕಳನ್ನು ಊರಿನಲ್ಲಿಯೇ ಬಿಟ್ಟು ಬೆಂಗಳೂರಿಗೆ ಬಂದು ಚಳಿಯಲ್ಲಿಯೇ ಹೋರಾಟ ನಡೆಸುತ್ತಿರುವ ಮಹಿಳೆಯರ ಸಂಕಷ್ಟವನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಪ್ರತಿದಿನ ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಮಾಧ್ಯಮಗಳ ಮುಂದೆ ಆಶಾ ಕಾರ್ಯಕರ್ತೆಯರು ತಮ್ಮ ಅಳಲು ತೋಡಿಕೊಳ್ಳುತ್ತಿದ್ದು, ಕಣ್ಣೀರಿಡುತ್ತಾ ವೇತನ ಹೆಚ್ಚಳಕ್ಕೆ ಮನವಿ ಮಾಡುತ್ತಿದ್ದಾರೆ. ಇಷ್ಟಾದರೂ ಸರ್ಕಾರ ಸ್ಪಂದಿಸದಿರುವುದು ವಿಷಾದನೀಯ. ಮುಖ್ಯಮಂತ್ರಿ ಡಿ ಕೆ ಶಿವ ಕುಮಾರ್ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಕಾರ್ಯಕರ್ತೆಯರೊಂದಿಗೆ ನೇರವಾಗಿ ಮಾತುಕತೆ ನಡೆಸಿ, ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಈ ಬೇಡಿಕೆಗಳು ಬರುವುದರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರು ವಿಶೇಷ ಕಾಳಜಿ ವಹಿಸಿ ಈ ವಿಚಾರವನ್ನು ತಂದು ಆಶಾ ಕಾರ್ಯಕರ್ತೆಯರ ಸಮಸ್ಯೆ ಪರಿಹರಿಸಲು ಮುಂದಾಗಬೇಕು. ಈ ತಾಯಂದಿರು, ಅಕ್ಕ-ತಂಗಿಯರ ಕಣ್ಣೀರು ಒರೆಸಿ, ಅವರಿಗೆ ನ್ಯಾಯ ಒದಗಿಸಿ ಗೌರವಯುತವಾಗಿ ತಮ್ಮ ತಮ್ಮ ಊರುಗಳಿಗೆ ಮರಳುವಂತೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಒಂದು ವೇಳೆ ಸರ್ಕಾರ ಕೂಡಲೇ ಸ್ಪಂದಿಸದಿದ್ದರೆ ರಾಜ್ಯದ ಪ್ರಗತಿಪರ, ಕನ್ನಡಪರ ಹಾಗೂ ದಲಿತಪರ ಸಂಘಟನೆಗಳು ಆಶಾ ಕಾರ್ಯಕರ್ತೆಯರ ಹೋರಾಟಕ್ಕೆ ಬೆಂಬಲ ಸೂಚಿಸಿ ರಾಜ್ಯಾದ್ಯಂತ ಹೋರಾಟ ನಡೆಸಬೇಕಾಗುತ್ತದೆ ಎಂದು ಹನುಮಂತಪ್ಪ ಮನ್ನಾಪುರಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಮಹಿಳೆಯರಿಗೆ ಬಟ್ಟೆ ಬದಲಾಯಿಸಲು, ತೊಳೆಯಲು ಹಾಗೂ ಶೌಚಾಲಯ ಬಳಸಲು ಸಮರ್ಪಕ ವ್ಯವಸ್ಥೆ ಇಲ್ಲದಿರುವುದು ತೀವ್ರ ತೊಂದರೆಯಾಗಿದೆ. ಸುಮಾರು 40 ಸಾವಿರ ಆಶಾ ಕಾರ್ಯಕರ್ತೆಯರ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ತಮ್ಮ ಗಂಡಂದಿರು ಹಾಗೂ ಮಕ್ಕಳನ್ನು ಊರಿನಲ್ಲಿಯೇ ಬಿಟ್ಟು ಬೆಂಗಳೂರಿಗೆ ಬಂದು ಚಳಿಯಲ್ಲಿಯೇ ಹೋರಾಟ ನಡೆಸುತ್ತಿರುವ ಮಹಿಳೆಯರ ಸಂಕಷ್ಟವನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಪ್ರತಿದಿನ ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಮಾಧ್ಯಮಗಳ ಮುಂದೆ ಆಶಾ ಕಾರ್ಯಕರ್ತೆಯರು ತಮ್ಮ ಅಳಲು ತೋಡಿಕೊಳ್ಳುತ್ತಿದ್ದು, ಕಣ್ಣೀರಿಡುತ್ತಾ ವೇತನ ಹೆಚ್ಚಳಕ್ಕೆ ಮನವಿ ಮಾಡುತ್ತಿದ್ದಾರೆ. ಇಷ್ಟಾದರೂ ಸರ್ಕಾರ ಸ್ಪಂದಿಸದಿರುವುದು ವಿಷಾದನೀಯ. ಮುಖ್ಯಮಂತ್ರಿ ಡಿ ಕೆ ಶಿವ ಕುಮಾರ್ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಕಾರ್ಯಕರ್ತೆಯರೊಂದಿಗೆ ನೇರವಾಗಿ ಮಾತುಕತೆ ನಡೆಸಿ, ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಈ ಬೇಡಿಕೆಗಳು ಬರುವುದರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರು ವಿಶೇಷ ಕಾಳಜಿ ವಹಿಸಿ ಈ ವಿಚಾರವನ್ನು ತಂದು ಆಶಾ ಕಾರ್ಯಕರ್ತೆಯರ ಸಮಸ್ಯೆ ಪರಿಹರಿಸಲು ಮುಂದಾಗಬೇಕು. ಈ ತಾಯಂದಿರು, ಅಕ್ಕ-ತಂಗಿಯರ ಕಣ್ಣೀರು ಒರೆಸಿ, ಅವರಿಗೆ ನ್ಯಾಯ ಒದಗಿಸಿ ಗೌರವಯುತವಾಗಿ ತಮ್ಮ ತಮ್ಮ ಊರುಗಳಿಗೆ ಮರಳುವಂತೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಒಂದು ವೇಳೆ ಸರ್ಕಾರ ಕೂಡಲೇ ಸ್ಪಂದಿಸದಿದ್ದರೆ ರಾಜ್ಯದ ಪ್ರಗತಿಪರ, ಕನ್ನಡಪರ ಹಾಗೂ ದಲಿತಪರ ಸಂಘಟನೆಗಳು ಆಶಾ ಕಾರ್ಯಕರ್ತೆಯರ ಹೋರಾಟಕ್ಕೆ ಬೆಂಬಲ ಸೂಚಿಸಿ ರಾಜ್ಯಾದ್ಯಂತ ಹೋರಾಟ ನಡೆಸಬೇಕಾಗುತ್ತದೆ ಎಂದು ಹನುಮಂತಪ್ಪ ಮನ್ನಾಪುರಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ಗ್ಲೋಬಲ್ ರಾವಿದಾಸಿಯಾ ವೆಲ್‌ಫೇರ್ ಫೌಂಡೇಶನ್ – ಅಂತರರಾಷ್ಟ್ರೀಯ ಶಿಕ್ಷೆ | ಆರೋಗ್ಯ | ಉದ್ಯೋಗ | ಸಾಮಾಜಿಕ ನ್ಯಾಯ | ಏಕತೆ



ಗ್ಲೋಬಲ್ ರಾವಿದಾಸಿಯಾ ವೆಲ್‌ಫೇರ್ ಫೌಂಡೇಶನ್ – ಅಂತರರಾಷ್ಟ್ರೀಯ

ಶಿಕ್ಷೆ | ಆರೋಗ್ಯ | ಉದ್ಯೋಗ | ಸಾಮಾಜಿಕ ನ್ಯಾಯ | ಏಕತೆ

ವಿಶೇಷ ಆಹ್ವಾನ

ಸಂವಿಧಾನ ದಿನ, ನವೆಂಬರ್ 26

ಆಯೋಜಕರು: ಕೇಶವ್ ಕುಮಾರ್ ಧಾಂಡಾ ಮತ್ತು ಎಲ್ಲಾ ಸಹೋದರರು

ಪ್ರಿಯ ಸಹೋದರರೇ, ಸಹೋದರಿಯರೇ,

ಜಯ ಗುರುದೇವ! ಜಯ ಗುರು ರವಿದೇವ! ಜಯ ಭೀಮ್! ಜಯ ಭಾರತ!

ನಾನು ಕೇಶವ್ ಕುಮಾರ್ ಧಾಂಡಾ, ಗ್ಲೋಬಲ್ ರಾವಿದಾಸಿಯಾ ವೆಲ್‌ಫೇರ್ ಫೌಂಡೇಶನ್ ಪರವಾಗಿ, ಭಾರತ ಮತ್ತು ವಿಶ್ವದಾದ್ಯಂತ ವಾಸಿಸುವ ನನ್ನ ಎಲ್ಲಾ ಸಹೋದರರು, ಸಹೋದರಿಯರಿಗೆ ವಿಶೇಷ ಆಹ್ವಾನವನ್ನು ನೀಡುತ್ತಿದ್ದೇನೆ.

ನವೆಂಬರ್ 26, ಸಂವಿಧಾನ ದಿನದ ಪವಿತ್ರ ಅಂಗವನ್ನು ಆಚರಿಸಲು, ಆಜಾದ್ ಸಮಾಜ್ ಪಕ್ಷ, ಭೀಮ್ ಆರ್ಮಿ ಮತ್ತು ಸಾಮಾಜಿಕ ಸಂಘಟನೆಗಳು ಆಯೋಜಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂವಿಧಾನ ದಿನವನ್ನು ಉತ್ಸಾಹದಿಂದ ಆಚರಿಸಲಾಗುತ್ತಿದೆ. ಆಹ್ವಾನಿಸುತ್ತಿದ್ದೇನೆ, ಅವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಈ ಮಹೋತ್ಸವವನ್ನು ಯಶಸ್ವಿಯಾಗಿಸಿ ಮತ್ತು ತಮ್ಮ ಘೋಷಣೆಗಳೊಂದಿಗೆ ಸಂವಿಧಾನ ರಚಕ ಡಾ. ಭೀಮರಾವ್ ಅಂಬೇಡ್ಕರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು.

ಸಾಮಾಜಿಕ ಪ್ರಗತಿಯನ್ನು ತರಲು, ಬಲವಾದ ಆದರ್ಶಶೀಲತೆ, ಶಿಕ್ಷೆ, ಸಂಘಟನೆ ಮತ್ತು ನಿಷ್ಠಾವಂತ ಕಾರ್ಯಕರ್ತರು ಅತ್ಯಗತ್ಯ. ನಮ್ಮ ಉದ್ದೇಶವೆಂದರೆ, ಸಮಾಜವನ್ನು ಜಾಗೃತಗೊಳಿಸಲು ಮತ್ತು ಬಲಪಡಿಸಲು ನಿರಂತರವಾಗಿ ಕೆಲಸ ಮಾಡುವುದು.

ನಮ್ಮ ಗುರು ಗೃಹಗಳು, ಧಾರ್ಮಿಕ ಸಂಸ್ಥೆಗಳು, ಸಾಮಾಜಿಕ ಸಂಘಟನೆಗಳು ಮತ್ತು ಸಮಾಜದ ಕಲ್ಯಾಣ, ಶಿಕ್ಷೆ, ಏಕತೆ ಮತ್ತು ಪ್ರಗತಿಯನ್ನು ಕಾಪಾಡಿಕೊಳ್ಳಲು ಕೆಲಸ ಮಾಡುತ್ತಿರುವ ಇತರ ಸಂಸ್ಥೆಗಳು ಈ ಪ್ರಯತ್ನಕ್ಕೆ ಬೆಂಬಲ ನೀಡಬೇಕು.

ನೆನಪಿರಲಿ: ಸಮಾಜವು ಯಾವುದೇ ಒಬ್ಬ ವ್ಯಕ್ತಿಯದು ಅಲ್ಲ, ಬದಲಾಗಿ ಎಲ್ಲಾ ಸಹೋದರರ ಏಕತೆ, ಸಹಕಾರ ಮತ್ತು ಜವಾಬ್ದಾರಿಯಿಂದ ಮುಂದೆ ಸಾಗುತ್ತದೆ.

ಬನ್ನಿ, ಸಂವಿಧಾನ ದಿನದ ಅಂಗವನ್ನು ಆಚರಿಸಲು, ಆದರ್ಶಶೀಲತೆ, ಭ್ರಾತೃತ್ವ, ಸಮಾನತೆ, ಸ್ವಾತಂತ್ರ್ಯ, ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯದ ಪ್ರತಿಜ್ಞೆಯನ್ನು ಬಲಪಡಿಸೋಣ.

ಎಲ್ಲಾ ಸಹೋದರರಿಗೆ ವಿನಮ್ರ ಆಹ್ವಾನವಿದೆ, ಈ ಕಾರ್ಯಕ್ರಮದಲ್ಲಿ ನಿಮ್ಮ ಸಕ್ರಿಯ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಿ.

— YALLAPPA RAGATE (PATIL)

ಜಾಲಹಳ್ಳಿಯಲ್ಲಿ ನ.25ರಂದು ಅದ್ಧೂರಿಯಾಗಿ 71ನೇ ಕನ್ನಡ ರಾಜ್ಯೋತ್ಸವ ಆಚರಣೆ



ಜಾಲಹಳ್ಳಿಯಲ್ಲಿ ನ.25ರಂದು ಅದ್ಧೂರಿಯಾಗಿ 71ನೇ ಕನ್ನಡ ರಾಜ್ಯೋತ್ಸವ ಆಚರಣೆ

ಅಂಬೇಡ್ಕರ್ ವೃತ್ತದಿಂದ ಭವ್ಯ ಮೆರವಣಿಗೆ; ವಿವಿಧ ಕ್ಷೇತ್ರಗಳ ಗಣ್ಯರಿಗೆ ಸನ್ಮಾನ

ನೀಡ್ 24 ನ್ಯೂಸ್

ಜಾಲಹಳ್ಳಿ, ನ.23: ಕನ್ನಡ ನಾಡು, ನುಡಿ, ಭಾಷೆ ಹಾಗೂ ಸಂಸ್ಕೃತಿಯ ವೈಭವವನ್ನು ಸಾರುವ ಉದ್ದೇಶದಿಂದ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ ನವೆಂಬರ್ 25ರಂದು 71ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಆಚರಿಸಲು ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ದೇವದುರ್ಗ ತಾಲೂಕು ಅಧ್ಯಕ್ಷ ನಂದಪ್ಪ ಪಿ. ಮಡ್ಡಿ ತಿಳಿಸಿದರು.

ಈ ಕುರಿತು ಸೋಮವಾರ ಜಾಲಹಳ್ಳಿಯ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕನ್ನಡ ಭಾಷೆಯ ಶ್ರೀಮಂತ ಪರಂಪರೆ, ನಾಡಿನ ಸಂಸ್ಕೃತಿ ಹಾಗೂ ಕನ್ನಡಿಗರ ಏಕತೆಯನ್ನು ಸಾರುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕನ್ನಡ ನಾಡು, ನುಡಿ ಹಾಗೂ ನೆಲದ ಗೌರವವನ್ನು ಎತ್ತಿಹಿಡಿಯುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ. ಆದ್ದರಿಂದ ಕನ್ನಡಾಭಿಮಾನಿಗಳು, ಸಾರ್ವಜನಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕನ್ನಡ ಹಬ್ಬವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಅಂಬೇಡ್ಕರ್ ವೃತ್ತದಿಂದ ಕನ್ನಡ ಬಾವುಟಗಳೊಂದಿಗೆ ಭವ್ಯ ಮೆರವಣಿಗೆ ಆರಂಭವಾಗಲಿದೆ. ಮೆರವಣಿಗೆಯು ಭಗೀರಥ ವೃತ್ತ, ಶ್ರೀ ಲಕ್ಷ್ಮೀರಂಗನಾಥ ದೇವಸ್ಥಾನ ಹಾಗೂ ವಾಲ್ಮೀಕಿ ವೃತ್ತದ ಮೂಲಕ ಸಾಗಿ ಸಮುದಾಯ ಆರೋಗ್ಯ ಕೇಂದ್ರದ ಸಮೀಪದಲ್ಲಿರುವ ಧ್ವಜ ಕಟ್ಟೆಯನ್ನು ತಲುಪಲಿದೆ. ಬಳಿಕ ಧ್ವಜಾರೋಹಣ ನೆರವೇರಿಸಿ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ತಿಳಿಸಿದರು.

ಕನ್ನಡಿಗರಿಗೆ ಆತ್ಮೀಯ ಆಹ್ವಾನ

ಕರ್ನಾಟಕ ರಕ್ಷಣಾ ವೇದಿಕೆಯ ಜಾಲಹಳ್ಳಿ ಹೋಬಳಿ ಅಧ್ಯಕ್ಷ ತಮ್ಮಣ್ಣ ಹೆರುಂಡಿ ಮಾತನಾಡಿ, ಕನ್ನಡ ರಾಜ್ಯೋತ್ಸವ ಕೇವಲ ಒಂದು ದಿನದ ಆಚರಣೆಯಾಗದೆ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯ ಮೇಲಿನ ಅಭಿಮಾನವನ್ನು ಮತ್ತಷ್ಟು ಬಲಪಡಿಸುವ ಹಬ್ಬವಾಗಿದೆ. ಸಮಸ್ತ ಕನ್ನಡಿಗರು, ನಾಡಿನ ನಾಗರಿಕರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಗುರು-ಹಿರಿಯರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕನ್ನಡದ ಹಬ್ಬವನ್ನು ಸಂಭ್ರಮದಿಂದ ಆಚರಿಸಬೇಕು ಎಂದು ಆತ್ಮೀಯವಾಗಿ ಆಹ್ವಾನಿಸಿದರು.

ಈ ಸಂದರ್ಭದಲ್ಲಿ ಕರವೇ ದೇವದುರ್ಗ ತಾಲೂಕು ಅಧ್ಯಕ್ಷ ನಂದಪ್ಪ ಪಿ. ಮಡ್ಡಿ, ಜಾಲಹಳ್ಳಿ ಹೋಬಳಿ ಅಧ್ಯಕ್ಷ ತಮ್ಮಣ್ಣ ಹೆರುಂಡಿ, ಪ್ರಧಾನ ಕಾರ್ಯದರ್ಶಿ ಬಸವರಾಜ ಹೆರುಂಡಿ, ಭೀಮರಾಯ ಮಕಾಶಿ, ವಿಕಲಚೇತನರ ಹೋಬಳಿ ಅಧ್ಯಕ್ಷ ರಂಗಪ್ಪ ಬಂಡಿ, ಯುವ ಮುಖಂಡ ಭೀಮಣ್ಣ ನಾಯಕ, ದೇವದುರ್ಗ ತಾಲೂಕು ಸಂಚಾಲಕ ವೆಂಕಟೇಶ, ಹೋಬಳಿ ಉಪಾಧ್ಯಕ್ಷ ಅಮರೇಶ, ಮಲ್ಲು ಹಡಪದಿ, ಗುರುನಾಥ ರೆಡ್ಡಿ ಸೇರಿದಂತೆ ಕರವೇಯ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

— MAHAMAD WALI QURESHI

LOCAL

ಬಸವಣ್ಣನವರ ಅವಹೇಳನ: ಚಡಚಣದಲ್ಲಿ ರವಿ ಹಂಜ್ ವಿರುದ್ಧ ಪ್ರತಿಭಟನೆ



ಸಾಂಸ್ಕೃತಿಕ ನಾಯಕ, ಮಹಾಮಾನವತಾವಾದಿ ಬಸವಣ್ಣನವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಹಿನ್ನೆಲೆಯಲ್ಲಿ ರವಿ ಹಂಜ್ ಎಂಬುವರ ವಿರುದ್ಧ ಚಡಚಣದಲ್ಲಿ ಪ್ರತಿಭಟನೆಗಳು ನಡೆದಿವೆ.

ಈ ಪ್ರತಿಭಟನೆಗಳು ಬಸವಣ್ಣನವರ ಆದರ್ಶಗಳನ್ನು ಮತ್ತು ಅವರ ಸಂದೇಶವನ್ನು ಗೌರವಿಸುವ ಸಮುದಾಯಗಳಿಂದ ಆಯೋಜನೆಗೊಂಡಿವೆ. ಬಸವಣ್ಣನವರನ್ನು ಅವಹೇಳನ ಮಾಡುವುದನ್ನು ಖಂಡಿಸಿ, ಪ್ರತಿಭಟನಾಕಾರರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಪ್ರತಿಭಟನೆಯು ಸಾರ್ವಜನಿಕ ಸ್ಥಳದಲ್ಲಿ ನಡೆಯಿತು, ಇದರಲ್ಲಿ ಸ್ಥಳೀಯ ಮುಖಂಡರು ಮತ್ತು ನಾಗರಿಕರು ಭಾಗವಹಿಸಿದ್ದರು. ಬಸವಣ್ಣನವರ ತತ್ವಗಳನ್ನು ಎತ್ತಿ ಹಿಡಿಯುವ ಮೂಲಕ, ಇಂತಹ ಅವಹೇಳನಕಾರಿ ಹೇಳಿಕೆಗಳನ್ನು ಸಹಿಸಲಾಗುವುದಿಲ್ಲ ಎಂದು ಪ್ರತಿಭಟನಾಕಾರರು ಒತ್ತಿ ಹೇಳಿದರು.

— YALLAPPA RAGATE (PATIL)

ನಾರಾಯಣಪುರ ಬಲದಂಡೆ ನಾಲೆಗೆ 2.5 ಟಿಎಂಸಿ ಹೆಚ್ಚುವರಿ ನೀರು ಹರಿಸಲು ಆಗ್ರಹರೈತರ ಹಿತಕ್ಕಿಂತ ಕೆಲ ಮುಖಂಡರಿಗೆ ಸ್ವಪ್ರತಿಷ್ಠೆಯೇ ಮುಖ್ಯವಾಗಿದೆ; ಪ್ರಭಾಕರ ಪಾಟೀಲ ಇಂಗಳದಾಳ ಆಕ್ರೋಶ



.

ದೇವದುರ್ಗ ಬ್ರೇಕಿಂಗ್ ನ್ಯೂಸ್

ಟಿಎಂಸಿ ಹೆಚ್ಚುವರಿ ನೀರು ಹರಿಸಲು ಆಗ್ರಹ

ರೈತರ ಹಿತಕ್ಕಿಂತ ಕೆಲ ಮುಖಂಡರಿಗೆ ಸ್ವಪ್ರತಿಷ್ಠೆಯೇ ಮುಖ್ಯವಾಗಿದೆ; ಪ್ರಭಾಕರ ಪಾಟೀಲ ಇಂಗಳದಾಳ ಆಕ್ರೋಶ

ದೇವದುರ್ಗ, ನ. 23: ನಾರಾಯಣಪುರ ಬಲದಂಡೆ ನಾಲೆಗೆ (ಎನ್‌ಆರ್‌ಬಿಸಿ) ಸಮರ್ಪಕವಾಗಿ ನೀರು ಹರಿಸದ ಪರಿಣಾಮ ಕಾಲುವೆ ವ್ಯಾಪ್ತಿಯಲ್ಲಿ ಬೆಳೆಗಳು ಒಣಗುತ್ತಿವೆ. ಆದ್ದರಿಂದ ತಕ್ಷಣವೇ ಹೆಚ್ಚುವರಿಯಾಗಿ 2.5 ಟಿಎಂಸಿ ನೀರು ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ರೈತರು ಸಾಲದ ಸುಳಿಗೆ ಸಿಲುಕಿ ಆತ್ಮಹತ್ಯೆಯಂತಹ ದುರಂತದ ಹಾದಿ ಹಿಡಿಯುವ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಭಾಕರ ಪಾಟೀಲ ಇಂಗಳದಾಳ ಎಚ್ಚರಿಕೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ನಿರ್ಲಕ್ಷ್ಯ ಹಾಗೂ ಕೆಲವು ರೈತ ಮುಖಂಡರ ಧೋರಣೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕಾಲುವೆ ನೀರನ್ನೇ ನಂಬಿ ರೈತರು ಪ್ರತಿ ಎಕರೆಗೆ ಬೀಜ, ಗೊಬ್ಬರ ಹಾಗೂ ಕ್ರಿಮಿನಾಶಕ ಸೇರಿದಂತೆ ಸುಮಾರು ₹1.50 ಲಕ್ಷ ಖರ್ಚು ಮಾಡಿ ಮೆಣಸಿನಕಾಯಿ ಬೆಳೆ ಬಿತ್ತನೆ ಮಾಡಿದ್ದಾರೆ. ಸದ್ಯ ಬೆಳೆಗಳಿಗೆ ನೀರಿನ ಅಗತ್ಯ ಹೆಚ್ಚಿದ್ದು, ಮುಂಬರುವ ಜನವರಿ ತಿಂಗಳವರೆಗೂ ನಿರಂತರವಾಗಿ ನೀರು ಹರಿಸಬೇಕು. ಸಚಿವರು ಹಾಗೂ ಜನಪ್ರತಿನಿಧಿಗಳ ಬೇಜವಾಬ್ದಾರಿತನದಿಂದ ಮುಖ್ಯಮಂತ್ರಿಗಳಿಗೆ ವಾಸ್ತವ ಪರಿಸ್ಥಿತಿಯ ಮಾಹಿತಿ ಸರಿಯಾಗಿ ತಲುಪಿಲ್ಲ. ಹೀಗಾಗಿ ಶೀಘ್ರದಲ್ಲೇ ರೈತರ ನಿಯೋಗವನ್ನು ಮುಖ್ಯಮಂತ್ರಿಗಳ ಬಳಿಗೆ ಕರೆದೊಯ್ದು ನೀರು ಬಿಡುಗಡೆಗೆ ಒತ್ತಾಯಿಸಲಾಗುವುದು ಎಂದರು.

ನೀರಿಗಾಗಿ ನಡೆಯುತ್ತಿರುವ ಹೋರಾಟದಲ್ಲಿ ಕೆಲವು ರೈತ ಮುಖಂಡರು ತಮ್ಮ ಸ್ವಪ್ರತಿಷ್ಠೆಗಾಗಿ 'ನಾ ಮುಂದೆ, ತಾ ಮುಂದೆ' ಎಂಬ ಧೋರಣೆ ಅನುಸರಿಸುತ್ತಿದ್ದು, ರೈತರ ಹಿತಾಸಕ್ತಿಯನ್ನು ಕಡೆಗಣಿಸುತ್ತಿದ್ದಾರೆ ಎಂದು ಆರೋಪಿಸಿದರು.

ರೈತರ ಹಿತದೃಷ್ಟಿಯಿಂದ 7–8 ಸಂಘಟನೆಗಳು ಒಗ್ಗೂಡಿ ಭೀಮರಾಯನಗುಡಿಯ ಬಾಪೂಗೌಡ ವೃತ್ತದಲ್ಲಿ ಎರಡು ದಿನಗಳ ಕಾಲ ಅಹೋರಾತ್ರಿ ಧರಣಿ ನಡೆಸಿದ್ದವು. ಈ ಹೋರಾಟಕ್ಕೆ ಪ್ರಾದೇಶಿಕ ಆಯುಕ್ತರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಆದರೆ, ಈ ನಡುವೆ ಒಬ್ಬ ರೈತ ಮುಖಂಡರು ಶಾಸಕ ವಿಜಯಾನಂದ ಕಾಶಪ್ಪನವರ ಅವರನ್ನು ಭೇಟಿ ಮಾಡಿ ಕೇವಲ 1.5 ಟಿಎಂಸಿ ನೀರು ಬಿಡುಗಡೆಗೆ ಒಪ್ಪಿಗೆ ಸೂಚಿಸಿ ಬಂದಿದ್ದಾರೆ. ಇಷ್ಟು ಪ್ರಮಾಣದ ನೀರು ಕಾಲುವೆಯ ಕೊನೆಯ ಭಾಗದ (ಟೇಲ್ ಎಂಡ್) ರೈತರಿಗೆ ತಲುಪುವುದಿಲ್ಲ. ಬದಲಾಗಿ ರೈತರ ನಡುವೆಯೇ ನೀರಿಗಾಗಿ ಸಂಘರ್ಷಕ್ಕೆ ಕಾರಣವಾಗಬಹುದು. ಅಷ್ಟಕ್ಕೂ ಒಪ್ಪಿಕೊಂಡಿದ್ದ 1.5 ಟಿಎಂಸಿ ನೀರೂ ಇನ್ನೂ ಬಿಡುಗಡೆಯಾಗಿಲ್ಲ ಎಂಬ ಗೊಂದಲವಿದೆ ಎಂದು ದೂರಿದರು.

ನಾಲೆಗೆ ನೀರು ಹರಿಸುವಂತೆ ಒತ್ತಾಯಿಸಿ ಈ ತಿಂಗಳ 5ರಿಂದ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ನಿರಂತರ ಹೋರಾಟ ನಡೆಸಲಾಗುತ್ತಿದೆ. ಈ ಕುರಿತು ಇಳಕಲ್‌ಗೆ ಭೇಟಿ ನೀಡಿದ್ದ ಶಾಸಕ ವಿಜಯಾನಂದ ಕಾಶಪ್ಪನವರಿಗೆ ರೈತರ ಸಮಸ್ಯೆ ಮನವರಿಕೆ ಮಾಡಿಕೊಟ್ಟಾಗ 2 ಟಿಎಂಸಿ ನೀರು ಬಿಡುಗಡೆ ಮಾಡುವುದಾಗಿ ತಿಳಿಸಿದ್ದರು. ಆದರೆ, ಆರು ದಿನಗಳಿಗೊಮ್ಮೆ ಮೂರು ಬಾರಿ ನೀರು ಹರಿಸುವಂತೆ ನಾವು ಒತ್ತಾಯಿಸಿದ್ದೆವು. ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವುದಾಗಿ ಶಾಸಕರು ಭರವಸೆ ನೀಡಿದ್ದರು. ರೈತ ಸಂಘದ ರಾಜ್ಯಾಧ್ಯಕ್ಷ ನಾಗೇಂದ್ರ ಹಾಗೂ ಚಾಮರಾಜ ಮಾಲಿ ಪಾಟೀಲ್ ಅವರೂ ಈ ವಿಚಾರದಲ್ಲಿ ಬಿಗಿಪಟ್ಟು ಹಿಡಿದಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಹನುಮಗೌಡ ಜಾಲಹಳ್ಳಿ, ರವಿಕುಮಾರ ಗಬ್ಬೂರು, ಶಾಂತಪ್ಪಗೌಡ, ರಮೇಶ, ಬೂದಯ್ಯಸ್ವಾಮಿ ಗಬ್ಬೂರು ಸೇರಿದಂತೆ ಅನೇಕ ರೈತರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ಸೋಲಾಪುರದಲ್ಲಿ ಬಿಪಿಎಲ್ ಕಾರ್ಡ್‌ದಾರರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಡಾ. ರಾಜೇಶ್ವರ್ ರೇವರ್ ಅವರ ನೇತೃತ್ವದಲ್ಲಿ ಅಪೆಕ್ಸ್ ಸೂಪರ್ ಸ್ಪೆಷಾಲಿಟಿ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಸಂಜೀವಿನಿ ಕೇಂದ್ರ, ಸೋಲಾಪುರದಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಜ್ಯೋತಿ ಸಂಜೀವಿನಿ (ಸರ್ಕಾರಿ ಯೋಜನೆ) ಅಡಿಯಲ್ಲಿ ವಿಶೇಷ ಆರೋಗ್ಯ ಸೇವಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮ 26-11-2026 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಂಜೀವಿನಿ ಆಸ್ಪತ್ರೆ, ಚಡಚಣ (ಮರಡಿ) ನಲ್ಲಿ ನಡೆಯಲಿದೆ. ಹೃದಯ ಸ

ವೃತ್ತದಿಂದ ಮೆರವಣಿಗೆ ಆರಂಭಗೊಂಡು ಭಗೀರಥ ವೃತ್ತ, ಶ್ರೀ ಲಕ್ಷ್ಮೀರಂಗನಾಥ ದೇವಸ್ಥಾನ ಹಾಗೂ ವಾಲ್ಮೀಕಿ ವೃತ್ತದ ಮೂಲಕ ಸಂಚರಿಸಿ ಸಮುದಾಯ ಆರೋಗ್ಯ ಕೇಂದ್ರದ ಸಮೀಪದ ಧ್ವಜ ಕಟ್ಟೆಯ ಬಳಿ ತಲುಪಲಿದೆ. ಅಲ್ಲಿ ಧ್ವಜಾರೋಹಣ ನೆರವೇರಿಸಿದ ಬಳಿಕ ವಿವಿಧ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಜಾಲಹಳ್ಳಿ ಹೋಬಳಿ ಅಧ್ಯಕ್ಷ ತಮ್ಮಣ್ಣ ಹೆರುಂಡಿ ಮಾತನಾಡಿ, ಸಮಸ್ತ ಕನ್ನಡಿಗರು, ನಾಡಿನ ನಾಗರಿಕರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಗುರು-ಹಿರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕನ್ನಡದ ಹಬ್ಬವನ್ನು ಸಂಭ್ರಮದಿಂದ ಆಚರಿಸಬೇಕು ಎಂದು ಆತ್ಮೀಯವಾಗಿ ಆಹ್ವಾನಿಸಿದರು.

ಈ ಸಂದರ್ಭದಲ್ಲಿ ಕರವೇ ದೇವದುರ್ಗ ತಾಲೂಕು ಅಧ್ಯಕ್ಷ ನಂದಪ್ಪ ಪಿ. ಮಡ್ಡಿ, ಜಾಲಹಳ್ಳಿ ಹೋಬಳಿ ಅಧ್ಯಕ್ಷ ತಮ್ಮಣ್ಣ ಹೆರುಂಡಿ, ಪ್ರಧಾನ ಕಾರ್ಯದರ್ಶಿ ಬಸವರಾಜ ಹೆರುಂಡಿ, ಭೀಮರಾಯ ಮಕಾಶಿ, ವಿಕಲಚೇತನರ ಹೋಬಳಿ ಅಧ್ಯಕ್ಷ ರಂಗಪ್ಪ ಬಂಡಿ, ಯುವ ಮುಖಂಡ ಭೀಮಣ್ಣ ನಾಯಕ, ದೇವದುರ್ಗ ತಾಲೂಕು ಸಂಚಾಲಕ ವೆಂಕಟೇಶ, ಹೋಬಳಿ ಉಪಾಧ್ಯಕ್ಷ ಅಮರೇಶ, ಮಲ್ಲು ಹಡಪದಿ, ಗುರುನಾಥ ರೆಡ್ಡಿ, ತಾಲೂಕು ಪ್ರಧಾನ ಕಾರ್ಯದರ್ಶಿ ಸೇರಿದಂತೆ ಕರವೇ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವರದಿ ಖಾಜಾ ಹುಸೇನ್ ಬಾಬಾ

ಜಾಲಹಳ್ಳಿ

— Khaja Hussain

ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ: ರವಿ ಹಂಜ್ ವಿರುದ್ಧ ಕಠಿಣ ಕ್ರಮಕ್ಕೆ ಜಾಲಹಳ್ಳಿ ಬಸವ ಸಮಿತಿ ಆಗ್ರಹ ಉಪತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಕೆ; 'ಬಸವ ಮಂಟಪ' ಕೃತಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಒತ್ತಾಯ



.

ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ: ರವಿ ಹಂಜ್ ವಿರುದ್ಧ ಕಠಿಣ ಕ್ರಮಕ್ಕೆ ಜಾಲಹಳ್ಳಿ ಬಸವ ಸಮಿತಿ ಆಗ್ರಹ

ಉಪತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಕೆ; 'ಬಸವ ಮಂಟಪ' ಕೃತಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಒತ್ತಾಯ

ಜಾಲಹಳ್ಳಿ, ನ. 23: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ ಜಗಜ್ಯೋತಿ ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಅನಿವಾಸಿ ಭಾರತೀಯ ಲೇಖಕ ರವಿ ಹಂಜ್ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬಸವ ಸಮಿತಿ ಜಾಲಹಳ್ಳಿ ವತಿಯಿಂದ ಉಪತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಜಾಲಹಳ್ಳಿ ನಾಡಕಚೇರಿಯಲ್ಲಿ ಮನವಿ ಸ್ವೀಕರಿಸಿದ ಕಂದಾಯ ಇಲಾಖೆಯ ಅಧಿಕಾರಿ ಶರಣೆಗೌಡ ಅವರು, ಮನವಿಯನ್ನು ಸರ್ಕಾರಕ್ಕೆ ರವಾನಿಸಲಾಗುವುದು ಎಂದು ತಿಳಿಸಿದರು.

12ನೇ ಶತಮಾನದಲ್ಲಿ ಸಾಮಾಜಿಕ ಸಮಾನತೆ, ಮಾನವೀಯ ಮೌಲ್ಯಗಳು ಹಾಗೂ ಜಾತಿರಹಿತ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದ ಬಸವಣ್ಣನವರ ತತ್ವಾದರ್ಶಗಳು ಮತ್ತು ವಚನಗಳನ್ನು ತಪ್ಪಾಗಿ ವ್ಯಾಖ್ಯಾನಿಸುವ ಮೂಲಕ ಇತಿಹಾಸವನ್ನು ತಿರುಚುವ ಪ್ರಯತ್ನ ನಡೆಯುತ್ತಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ.

ಲೇಖನಗಳನ್ನು ಪ್ರಕಟಿಸುತ್ತಿರುವ ರವಿ ಹಂಜ್, ಇದೀಗ ಅವುಗಳನ್ನು 'ಬಸವ ಮಂಟಪ' ಕೃತಿಯ ರೂಪದಲ್ಲಿ ಹೊರತಂದಿದ್ದಾರೆ. ಅಲ್ಲದೆ, ಯೂಟ್ಯೂಬ್ ಚಾನೆಲ್‌ನಲ್ಲಿ ಲಿಂಗಾಯತ ಸಮುದಾಯದ ಕುರಿತು ಅವಹೇಳನಕಾರಿ ಪದಗಳನ್ನು ಬಳಸಿರುವುದು ಬಸವ ಅನುಯಾಯಿಗಳು ಹಾಗೂ ಸಮುದಾಯದ ಭಾವನೆಗಳಿಗೆ ನೋವುಂಟು ಮಾಡಿದೆ ಎಂದು ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ.

ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಗೆ ಧಕ್ಕೆ ಉಂಟುಮಾಡುವ ಇಂತಹ ಕೃತ್ಯಗಳ ವಿರುದ್ಧ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ರವಿ ಹಂಜ್ ವಿರುದ್ಧ ಸ್ವಯಂಪ್ರೇರಿತವಾಗಿ (ಸುಮೋಟೋ) ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು. ವಿವಾದಕ್ಕೆ ಕಾರಣವಾಗಿರುವ 'ಬಸವ ಮಂಟಪ' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಬಸವ ಸಮಿತಿ ಸಂಚಾಲಕ ಚಂದ್ರಶೇಖರ ನಾಡಗೌಡ, ಬಸನಗೌಡ ಪಾಟೀಲ್, ಸಲಬಣ್ಣ ಸೌದ್ರಿ, ರಂಗಪ್ಪ ಗುಂಡಗುರ್ತಿ, ಚಂದಪ್ಪ ಬುದಿನ್ನಿ, ಶಿವಲಿಂಗಪ್ಪ, ಇಮಾಮಸಾಬ್ ಉದ್ದರ, ಗುರುನಾಥ ಚಿಂಚೋಡಿ, ಖುರ್ಶಿದ್ ಪಟೇಲ್, ಅದಪ್ಪ ಇಳಿಗಡಿ, ಅಂಬರೇಗೌಡ, ಸಿದ್ದಪ್ಪ ತಗ್ಗೆಳ್ಳಿ, ನವೀನ್, ಭೀಮಣ್ಣ ನಾಯಕ, ಶ್ರೀನಿವಾಸ ತಿಂಪುರ್, ಲಿಂಗಣ್ಣ ಮಕಾಶಿ, ಬಸವರಾಜ, ವೆಂಕನಗೌಡ ನಾಯಕ (ವಕೀಲರು), ಯೇಸು ಡಿ.ಕೆ., ಬಸವರಾಜ ಗೋಪಾಳಪೂರ, ರಂಗಣ್ಣ ಕೊಲ್ಕರ್, ಮಹೇಶ್ ಹೊಟ್ಟಿ, ಸೂಗಪ್ಪ ಸೌದ್ರಿ, ರಂಗಪ್ಪ ತ್ಯಾಪ್ಲಿ, ರಾಚಯ್ಯ ಸ್ವಾಮಿ, ನಿಂಗಪ್ಪ ಹಂಪರಗುಂದಿ (ಗ್ರಾ.ಪಂ. ಸದಸ್ಯ), ಸಾಬಣ್ಣ ಕಮಲದಿನ್ನಿ, ರಮೇಶ ಬಾಗೂರು, ಹನುಮಯ್ಯ ಪೂಜಾರಿ, ಶಿವನಗೌಡ, ರಾಮನಗೌಡ, ಶಿವು ದೇಸಾಯಿ, ಬಾಳಪ್ಪ ಭಾವಿಮನಿ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ವಿವಿಧ ಪಕ್ಷಗಳ ಮುಖಂಡರು ಹಾಗೂ ಬಸವಣ್ಣನವರ ಅಭಿಮಾನಿಗಳು ಉಪಸ್ಥಿತರಿದ್ದು, ಮನವಿ ಪತ್ರಕ್ಕೆ ಸಹಿ ಹಾಕಿದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ಶಿಕ್ಷಕರ ದೈನಂದಿನ ಬೋಧನಾ ಒತ್ತಡವನ್ನು ನಿವಾರಿಸಿ ಸುಪ್ತ ಪ್ರತಿಭೆಗಳನ್ನು ಅನಾವರಣಗೊಳ್ಳಬೇಕು - ಶ್ರೀ ಎಮ್ ವ್ಹಿ ಹಿರೇಮಠ



ಬಸವನ ಬಾಗೇವಾಡಿ ಪಟ್ಟಣದ ಟಿ ಎಲ್ ಸಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ 2026-27 ನೇ ಸಾಲಿನ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಭೆ ಚಟುವಟಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರಿಗಾಗಿ ತಾಲೂಕು ಮಟ್ಟದ ಸಹಪಠ್ಯ ಚಟುವಟಿಕೆ ಸ್ಪರ್ಧೆಗಳು ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ಸಂಬಂಧಿತ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮವಾಗಿದ್ದು ಈ ಸ್ಪರ್ಧೆಗಳ ಮುಖ್ಯ ಉದ್ದೇಶ ಶಿಕ್ಷಕರ ದೈನಂದಿನ ಬೋಧನಾ ಒತ್ತಡವನ್ನು ನಿವಾರಿಸುವುದು ಮತ್ತು ಅವರ ಸುಪ್ತ ಪ್ರತಿಭೆಗಳನ್ನು ಅನಾವರಣಗೊಳಿಸುವುದಾಗಿದೆ ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವಿಜಯಪುರದ ಉಪನ್ಯಾಸಕರಾದ ಶ್ರೀ ಎಮ್ ವ್ಹಿ ಹಿರೇಮಠ ಮಾತನಾಡಿದರು.

ಶಿಕ್ಷಕರು ಕೇವಲ ಪಠ್ಯ ಬೋಧನೆಗೆ ಸೀಮಿತವಾಗದೆ, ತಮ್ಮಲ್ಲಿರುವ ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಸೃಜನಶೀಲ ಪ್ರತಿಭೆಗಳನ್ನು ಅಭಿವ್ಯಕ್ತಿಸಲು ಹಾಗೂ ವೃತ್ತಿಪರ ಒತ್ತಡದಿಂದ ಹೊರಬಂದು ಉಲ್ಲಾಸದಿಂದಿರಲು ಈ ಸ್ಪರ್ಧೆಗಳು ವೇದಿಕೆಯಾಗಿವೆ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ರೇಣುಕ ಕಲಬುರ್ಗಿ ಮಾತನಾಡಿದರು.

ಸ್ಪರ್ಧೆಗಳಲ್ಲಿ ಎಲ್ಲ ಸರ್ಕಾರಿ ಅನುದಾನಿತ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಭಾಗವಹಿಸಲು ಅವಕಾಶವಿದ್ದು ಪ್ರಾಥಮಿಕ ಮತ್ತು ಪ್ರೌಢ ವಿಭಾಗಗಳಿಗೆ ಪ್ರತ್ಯೇಕವಾದ ಸ್ಪರ್ಧೆಗಳು ನಡೆಯುತ್ತವೆ ಎಂದು ಸಹಪಠ್ಯ ಚಟುವಟಿಕೆಗಳ ಜಿಲ್ಲಾ ನೋಡಲು ಅಧಿಕಾರಿಗಳಾದ ಶ್ರೀ ಎಸ್ ಎಮ್ ಬ್ಯಾಹಟ್ಟಿ ಮಾತನಾಡಿದರು.

ಇಂದು ನಡೆದ ಸ್ಪರ್ಧೆಗಳಲ್ಲಿ ವಿವಿಧ ಶಾಲೆಗಳಿಂದ ಆಗಮಿಸಿದ 116 ಶಿಕ್ಷಕರು ಭಾಗವಹಿಸಿದರು ಹಾಗೂ ವಿಜಯದ ಶಿಕ್ಷಕರಿಗೆ ಪ್ರಶಸ್ತಿ ಪುತ್ರ ಹಾಗೂ ನಗದು ಬಹುಮಾನವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕ ನೋಡಲ್ ಅಧಿಕಾರದ ಶ್ರೀ ಎಸ್ ಎಸ್ ಅಂಬಲಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳ ಶ್ರೀ ಬಿ ಎಸ್ ಅವಟಿ, ಶ್ರೀ ರಮೇಶ ಪವಾರ ಉಪಸ್ಥಿತರಿದ್ದರು. ಶ್ರೀ ಎಮ್ ವಿ ಗಬ್ಬೂರ ಬಿ ಆರ್ ಪಿ ಸ್ವಾಗತಿ ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀಮತಿ ಭಾರತಿ ಪಾಟೀಲ ವಂದಿಸಿದರು.

— Mallikarjun Gabbur

LOCAL

ಕಾಮಸಮುದ್ರ ಹೋಬಳಿಯ ದೊಡ್ಡಪನಂಡಹಳ್ಳಿಯಲ್ಲಿ ಕಾಡು ಆನೆ ಕಂಡು ಗ್ರಾಮಸ್ಥರು ಎಚ್ಚರಿಸಿದರು



ಕಾಮಸಮುದ್ರ ಹೋಬಳಿಯ ದೊಡ್ಡಪನಂಡಹಳ್ಳಿಯ ವ್ಯಾಪ್ತಿಯಲ್ಲಿ ಕಾಡು ಆನೆ ಕಾಣಿಸಿಕೊಂಡು, ಗ್ರಾಮಸ್ಥರು ತಕ್ಷಣ ಜನರಿಗೆ ಎಚ್ಚರಿಕೆ ನೀಡಿದರು.

ಆನೆ ಸ್ಥಳೀಯ ಕೃಷಿ ಪ್ರದೇಶಗಳ ಹತ್ತಿರ ಕಂಡುಬಂದಿದ್ದು, ಜನಸಮುದಾಯದ ಸುರಕ್ಷತೆಯ ಬಗ್ಗೆ ಆತಂಕವನ್ನು ಉಂಟುಮಾಡಿದೆ.

ಗ್ರಾಮಸ್ಥರು ಸಂಬಂಧಿತ ಅಧಿಕಾರಿಗಳನ್ನು ಸಂಪರ್ಕಿಸಿ, ಆನೆಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ವಿನಂತಿ ಮಾಡಿದ್ದಾರೆ.

ಈ ರೀತಿಯ ಮಾನವ-ಆನೆ ಸಂಘರ್ಷಗಳು ಈ ಪ್ರದೇಶದಲ್ಲಿ ಹೆಚ್ಚಾಗಿರುವುದರಿಂದ, ತಕ್ಷಣದ ನಿರ್ವಹಣೆ ಮತ್ತು ಸಂರಕ್ಷಣಾ ಕ್ರಮಗಳ ಅಗತ್ಯವನ್ನು ಸ್ಥಳೀಯರು ಒತ್ತಿ ಹೇಳಿದ್ದಾರೆ.

— ಶಿವಪ್ಪ ಬಂಗಾರಪೇಟೆ

ಶೀಗಣಾಪುರ ಗ್ರಾಮದ ಲಕ್ಷ್ಮಿ ದೇವಿಯ ನೂತನ ಗದ್ದುಗೆ ಪುನರ್ ನಿರ್ಮಾಣ , ಹೋಮ ಹವನ ಕಾರ್ಯಕ್ರಮ.



ಶೀಗಣಾಪುರ ಗ್ರಾಮದ ಲಕ್ಷ್ಮಿ ದೇವಿಯ ನೂತನ ಗದ್ದುಗೆ ಪುನರ್ ನಿರ್ಮಾಣ , ಹೋಮ ಹವನ ಕಾರ್ಯಕ್ರಮ.

ಝಳಕಿ : ಲಕ್ಷ್ಮೀ ದೇವಸ್ಥಾನ ಆವರಣದಲ್ಲಿ ನಸುಕಿನ ಜಾವದಲ್ಲಿ ಹೋಮ ಹವನ, 11 ಗಂಟೆಗೆ ಶ್ರೀ ಸಿದ್ಧಾರೂಢ ಮಠದಿಂದ ಲಕ್ಷ್ಮಿ ದೇವಸ್ಥಾನದ ವರೆಗೆ, ವೃಂದ ವಾಧ್ಯಗಳೊಂದಿಗೆ, ನೂರಾರು ಮುತ್ತೈದೆಯರಿಂದ ಕುಂಭ ಮೇಳದೊಂದಿಗೆ ಗ್ರಾಮದ ಮುಖ್ಯ ಬಿದಿಗಳಲ್ಲಿ ಭವ್ಯ ಮೆರವಣಿಗೆ, ನಂದರಗಿ ಭೀರಣ್ಣ ದೇವರು, ಶೀಗಣಾಪುರ ಲಕ್ಷ್ಮೀ, ಶಿರಡೋಣ ಶೀಲಾವಂತಿ, ಶೀಗಣಪುರ ದೊಡ್ಡಿ ಮಾಳಿಂಗರಾಯ, ಹಡಲಸಂಗ ಲಾಯವ್ವ 5 ಗ್ರಾಮಗಳ ಪಲ್ಲಕ್ಕಿಗಳ ಭವ್ಯ ಭೇಟಿ, ಸಂಜೆ ಎರಡು ಗ್ರಾಮಗಳ ಡೊಳ್ಳಿನ ಸಂಘದವದರಿಂದ ಡೊಳ್ಳಿನ ಪದಗಳು ಜರೂಗಿಸಲಾಯಿತು.

ಸಮಾಜ ಸೇವೆಗೆ ಸದಾ ಸಿದ್ಧ: ಬಿ.ಬಿ.ಆರ್. ಬಾಬಣ್ಣ



ಸಮಾಜ ಸೇವೆಗೆ ಸದಾ ಸಿದ್ಧ: ಬಿ.ಬಿ.ಆರ್. ಬಾಬಣ್ಣ

ಪಿರಿಯಾಪಟ್ಟಣ: ಪಟ್ಟಣದ ಬೆಟ್ಟದಪುರ ರಸ್ತೆಯಲ್ಲಿರುವ ಶ್ರೀ ಸಾಯಿ ಸಮುದಾಯ ಭವನದ ಹಿಂಭಾಗದಲ್ಲಿ ಸಮಾಜ ಸೇವಾ ರತ್ನ ಬಿ.ಬಿ.ಆರ್. ನರೇಂದ್ರ ಬಾಬಣ್ಣ ಅವರ ನೂತನ ಸಮಾಜ ಸೇವಾ ಕೇಂದ್ರದ ಕಚೇರಿಯನ್ನು ಸೋಮವಾರ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಬಿ.ಆರ್. ನರೇಂದ್ರ ಬಾಬಣ್ಣ ಅವರು, "ನಾನು ಮೂಲತಃ ಬೆಂಗಳೂರಿನ ಆನೇಕಲ್ ಗ್ರಾಮದವನಾಗಿದ್ದು, ಕಳೆದ 19 ವರ್ಷಗಳಿಂದ ಪಿರಿಯಾಪಟ್ಟಣ ತಾಲೂಕಿನ ಜನರೊಂದಿಗೆ ಒಡನಾಟ ಹೊಂದಿದ್ದೇನೆ. ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶದಿಂದ ಈ ಕಚೇರಿಯನ್ನು ಆರಂಭಿಸಿದ್ದೇನೆ. ಸಾರ್ವಜನಿಕರು ಯಾವುದೇ ಸಂದರ್ಭದಲ್ಲಿ ತಮ್ಮ ಕಷ್ಟ-ಕಾರ್ಪಣ್ಯಗಳನ್ನು ತಿಳಿಸಲು ಕಚೇರಿಗೆ ಆಗಮಿಸಿ ನನ್ನನ್ನು ಸಂಪರ್ಕಿಸಬಹುದು. ಜನರ ಸೇವೆ ಹಾಗೂ ಸಹಕಾರಕ್ಕೆ ನಾನು ಸದಾ ಸಿದ್ಧನಿದ್ದೇನೆ" ಎಂದರು.

ತಾಲೂಕಿನ ಜನರಲ್ಲಿ ಜಾತಿ, ಭೇದ, ಮೇಲು-ಕೀಳು ಎಂಬ ಭಾವನೆಗಳಿಗೆ ಅವಕಾಶ ನೀಡದೆ, ನಾವೆಲ್ಲರೂ ಒಂದೇ ಎಂಬ ಸಹೋದರತ್ವದ ಮನೋಭಾವ ಬೆಳೆಸಿಕೊಳ್ಳಬೇಕು. ಸಮಾಜದ ಪ್ರತಿಯೊಬ್ಬರಿಗೂ ನೆರವಾಗುವ ನಿಟ್ಟಿನಲ್ಲಿ ಈ ಕೇಂದ್ರ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ಕಚೇರಿ ಉದ್ಘಾಟನೆಯ ಬಳಿಕ ತಾಲೂಕಿನ ದೊರೆಕೆರೆ, ಹೊಸಕೊಪ್ಪಲು, ರಾಮನಾಥತುಂಗಾ, ಸುಂಡವಾಳು ಹಾಗೂ ನಂದಿಪುರ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಸ್ಥರ ಕುಂದುಕೊರತೆಗಳನ್ನು ಆಲಿಸಿದರು. ಗ್ರಾಮಗಳಲ್ಲಿನ ಮೂಲಭೂತ ಸೌಕರ್ಯಗಳ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲು ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹೊಸಕೊಪ್ಪಲು ಗ್ರಾಮದ ರೈತ ಸಂಘದ ಸದಸ್ಯ ಸುಬ್ಬೇಗೌಡ ಅವರು ಗ್ರಾಮಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಹಕಾರ ನೀಡುವುದರ ಜತೆಗೆ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ಸೌಲಭ್ಯ ಕಲ್ಪಿಸುವಂತೆ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟರು.

ಇದಕ್ಕೆ ಪ್ರತಿಕ್ರಿಯಿಸಿದ ಬಾಬಣ್ಣ ಅವರು, "ಸಮಾಜ ಸೇವೆಯ ಉದ್ದೇಶದಿಂದಲೇ ಈ ತಾಲೂಕಿಗೆ ಬಂದಿದ್ದೇನೆ. ಸಾರ್ವಜನಿಕರ ಸಮಸ್ಯೆಗಳಿಗೆ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಸ್ಪಂದಿಸಲು ಪ್ರಾಮಾಣಿಕವಾಗಿ ಸಹಕರಿಸುತ್ತೇನೆ" ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗಣೇಶ್ ಹರಿಲಾಪುರ, ಶೇಖರ್ ತಾತನಹಳ್ಳಿ, ಟೈಲರ್ ಗಣೇಶ್, ಟಿ.ಟಿ. ಗೋವಿಂದ, ಶಶಿಕುಮಾರ್, ದೇವಪುರ್ ಕರೀಗೌಡ, ಮಹದೇವ್, ತಾತನಹಳ್ಳಿ ಕುಮಾರ್, ತಾತನಹಳ್ಳಿ ಮಹೇಶ್, ಪದ್ಮನಾಭ ಸೇರಿದಂತೆ ಹಲವರು ಉಪಸ್ಥಿತರಿದ್ದರು.

— Vasanthakumar C S

ಕ್ಲಿನಿಕ್ ಮತ್ತು ಮೆಡಿಕಲ್ 4ನೇ ವಾರ್ಷಿಕೋತ್ಸವ: ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ



ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ಜಾಲಹಳ್ಳಿ ಯಲ್ಲಿ ಹಿಮಾಂಶು ಕ್ಲಿನಿಕ್ ಮತ್ತು ಮೆಡಿಕಲ್ 4ನೇ ವಾರ್ಷಿಕೋತ್ಸವ: ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ

ನಂದಿ ಆಸ್ಪತ್ರೆಯ ಸಹಯೋಗದಲ್ಲಿ ವಿವಿಧ ತಜ್ಞ ವೈದ್ಯರಿಂದ ತಪಾಸಣೆ; ಸುಮಾರು 210 ಜನರಿಗೆ ಚಿಕಿತ್ಸೆ ಹಾಗೂ ವೈದ್ಯಕೀಯ ಸಲಹೆ

ಜಾಲಹಳ್ಳಿ, ನ. 23: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿರುವ ಹಿಮಾಂಶು ಕ್ಲಿನಿಕ್ ಮತ್ತು ಹಿಮಾಂಶು ಮೆಡಿಕಲ್‌ನ 4ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ನ. 23ರಂದು ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿಯಾಗಿ ಜರುಗಿತು.

ಜಾಲಹಳ್ಳಿಯ ಸಂತೆ ರಸ್ತೆಯ ಬಸವಲಿಂಗಪ್ಪ ಬಾವಿ ಎದುರಿನ ಹಿಮಾಂಶು ಕ್ಲಿನಿಕ್‌ನಲ್ಲಿ ಬೆಳಿಗ್ಗೆ 10.30ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಡೆದ ಶಿಬಿರದಲ್ಲಿ ನಂದಿ ಆಸ್ಪತ್ರೆಯ ಸಹಯೋಗದೊಂದಿಗೆ ವಿವಿಧ ವಿಭಾಗಗಳ ತಜ್ಞ ವೈದ್ಯರು ಭಾಗವಹಿಸಿ ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ, ಚಿಕಿತ್ಸಾ ಸಲಹೆ ಹಾಗೂ ವೈದ್ಯಕೀಯ ಮಾರ್ಗದರ್ಶನ ನೀಡಿದರು. ಶಿಬಿರದಲ್ಲಿ ಉಚಿತ ರಕ್ತದೊತ್ತಡ (ಬಿಪಿ) ಮತ್ತು ರಕ್ತದ ಸಕ್ಕರೆ (ಶುಗರ್) ತಪಾಸಣೆ ನಡೆಸಿ, ಉಚಿತ ಔಷಧ ವಿತರಿಸಲಾಯಿತು. ಸುಮಾರು 210 ಜನರು ಆರೋಗ್ಯ ತಪಾಸಣೆ ಮಾಡಿಸಿಕೊಂಡು ಶಿಬಿರದ ಪ್ರಯೋಜನ ಪಡೆದರು.

ವಿವಿಧ ವಿಭಾಗಗಳ ತಜ್ಞ ವೈದ್ಯರಿಂದ ಸೇವೆ

ಡಾ. ಸಾಬಣ್ಣ ನಾಯಕ ನಾಗಡದನ್ನಿ (MD ಜನರಲ್ ಮೆಡಿಸಿನ್, MMC ಮಧುರೈ) ಅವರು ಹೃದಯ ಸಂಬಂಧಿ ಕಾಯಿಲೆಗಳು, ರಕ್ತದೊತ್ತಡ, ಮಧುಮೇಹ, ಉಸಿರಾಟದ ತೊಂದರೆ, ಕ್ಷಯರೋಗ (ಟಿಬಿ), ಅಸ್ತಮಾ ಹಾಗೂ ಲಿವರ್ ಮತ್ತು ಕಿಡ್ನಿ ಸಮಸ್ಯೆಗಳ ಕುರಿತು ತಪಾಸಣೆ ನಡೆಸಿ

ಮಾಲೀಕ ಅಸ್ಲಾಂ ಮಾತನಾಡಿ, ಕ್ಲಿನಿಕ್ ಮತ್ತು ಮೆಡಿಕಲ್‌ನ ನಾಲ್ಕನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ನಂದಿ ಆಸ್ಪತ್ರೆಯ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಜಾಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಜನರ ಸಹಕಾರದಿಂದ ನಮ್ಮ ಕ್ಲಿನಿಕ್ ನಾಲ್ಕು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿದೆ. ಜಾಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರ ಸಹಕಾರ ಹೀಗೆಯೇ ಮುಂದುವರಿಯಲಿ. ಎಲ್ಲರೂ ಉತ್ತಮ ಆರೋಗ್ಯ ಹೊಂದಲಿ ಎಂದು ಹಾರೈಸುತ್ತೇನೆ ಎಂದು ವೈದ್ಯರಾದ ಡಾ. ಮಲ್ಲಿಕಾರ್ಜುನ ಪಿ. ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಅಬ್ದುಲ್ ರಹಮಾನ್ ಖುರೇಶಿ, ಬಾಬಾ ಮೆಡಿಕಲ್, ತಾತಪ್ಪ ನಾಯಕ, ನಿವೃತ್ತ ಪೊಲೀಸ್ ಅಧಿಕಾರಿ ಫಾಕೃದ್ದಿನ್ ಸೇರಿದಂತೆ ಕ್ಲಿನಿಕ್ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಜಾಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಶಿಬಿರವನ್ನು ಯಶಸ್ವಿಗೊಳಿಸಿದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ.

— Khaja Hussain

DEFENCE

ತಾಲೂಕಿನ ವಿವಿಧ ಗ್ರಾಮಕ್ಕೆ ತೆರಳಿ ಗ್ರಾಮದ ಕುಂದು ಕೊರತೆ ಆಲಿಸಿದ ಬಾಬಣ್ಣ



ಪಿರಿಯಾಪಟ್ಟಣ: ಪಟ್ಟಣದ ಬೆಟ್ಟದಪುರ ರಸ್ತೆಯಲ್ಲಿರುವ ಶ್ರೀ ಸಾಯಿ ಸಮುದಾಯ ಭವನದ ಹಿಂಭಾಗದಲ್ಲಿ ಸಮಾಜ ಸೇವಾ ರತ್ನ ಬಿ.ಬಿ.ಆರ್. ನರೇಂದ್ರ ಬಾಬಣ್ಣ ಅವರ ನೂತನ ಸಮಾಜ ಸೇವಾ ಕೇಂದ್ರದ ಕಚೇರಿಯನ್ನು ಸೋಮವಾರ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಬಿ.ಆರ್. ನರೇಂದ್ರ ಬಾಬಣ್ಣ ಅವರು, "ನಾನು ಮೂಲತಃ ಬೆಂಗಳೂರಿನ ಆನೇಕಲ್ ಗ್ರಾಮದವನಾಗಿದ್ದು, ಕಳೆದ 19 ವರ್ಷಗಳಿಂದ ಪಿರಿಯಾಪಟ್ಟಣ ತಾಲೂಕಿನ ಜನರೊಂದಿಗೆ ಒಡನಾಟ ಹೊಂದಿದ್ದೇನೆ. ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶದಿಂದ ಈ ಕಚೇರಿಯನ್ನು ಆರಂಭಿಸಿದ್ದೇನೆ. ಸಾರ್ವಜನಿಕರು ಯಾವುದೇ ಸಂದರ್ಭದಲ್ಲಿ ತಮ್ಮ ಕಷ್ಟ-ಕಾರ್ಪಣ್ಯಗಳನ್ನು ತಿಳಿಸಲು ಕಚೇರಿಗೆ ಆಗಮಿಸಿ ನನ್ನನ್ನು ಸಂಪರ್ಕಿಸಬಹುದು. ಜನರ ಸೇವೆ ಹಾಗೂ ಸಹಕಾರಕ್ಕೆ ನಾನು ಸದಾ ಸಿದ್ಧನಿದ್ದೇನೆ" ಎಂದರು.

ತಾಲೂಕಿನ ಜನರಲ್ಲಿ ಜಾತಿ, ಭೇದ, ಮೇಲು-ಕೀಳು ಎಂಬ ಭಾವನೆಗಳಿಗೆ ಅವಕಾಶ ನೀಡದೆ, ನಾವೆಲ್ಲರೂ ಒಂದೇ ಎಂಬ ಸಹೋದರತ್ವದ ಮನೋಭಾವ ಬೆಳೆಸಿಕೊಳ್ಳಬೇಕು. ಸಮಾಜದ ಪ್ರತಿಯೊಬ್ಬರಿಗೂ ನೆರವಾಗುವ ನಿಟ್ಟಿನಲ್ಲಿ ಈ ಕೇಂದ್ರ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ಪಿರಿಯಾಪಟ್ಟಣ: ಪಟ್ಟಣದ ಬೆಟ್ಟದಪುರ ರಸ್ತೆಯಲ್ಲಿರುವ ಶ್ರೀ ಸಾಯಿ ಸಮುದಾಯ ಭವನದ ಹಿಂಭಾಗದಲ್ಲಿ ಸಮಾಜ ಸೇವಾ ರತ್ನ ಬಿ.ಬಿ.ಆರ್. ನರೇಂದ್ರ ಬಾಬಣ್ಣ ಅವರ ನೂತನ ಸಮಾಜ ಸೇವಾ ಕೇಂದ್ರದ ಕಚೇರಿಯನ್ನು ಸೋಮವಾರ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಬಿ.ಆರ್. ನರೇಂದ್ರ ಬಾಬಣ್ಣ ಅವರು, "ನಾನು ಮೂಲತಃ ಬೆಂಗಳೂರಿನ ಆನೇಕಲ್ ಗ್ರಾಮದವನಾಗಿದ್ದು, ಕಳೆದ 19 ವರ್ಷಗಳಿಂದ ಪಿರಿಯಾಪಟ್ಟಣ ತಾಲೂಕಿನ ಜನರೊಂದಿಗೆ ಒಡನಾಟ ಹೊಂದಿದ್ದೇನೆ. ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶದಿಂದ ಈ ಕಚೇರಿಯನ್ನು ಆರಂಭಿಸಿದ್ದೇನೆ. ಸಾರ್ವಜನಿಕರು ಯಾವುದೇ ಸಂದರ್ಭದಲ್ಲಿ ತಮ್ಮ ಕಷ್ಟ-ಕಾರ್ಪಣ್ಯಗಳನ್ನು ತಿಳಿಸಲು ಕಚೇರಿಗೆ ಆಗಮಿಸಿ ನನ್ನನ್ನು ಸಂಪರ್ಕಿಸಬಹುದು. ಜನರ ಸೇವೆ ಹಾಗೂ ಸಹಕಾರಕ್ಕೆ ನಾನು ಸದಾ ಸಿದ್ಧನಿದ್ದೇನೆ" ಎಂದರು.

ತಾಲೂಕಿನ ಜನರಲ್ಲಿ ಜಾತಿ, ಭೇದ, ಮೇಲು-ಕೀಳು ಎಂಬ ಭಾವನೆಗಳಿಗೆ ಅವಕಾಶ ನೀಡದೆ, ನಾವೆಲ್ಲರೂ ಒಂದೇ ಎಂಬ ಸಹೋದರತ್ವದ ಮನೋಭಾವ ಬೆಳೆಸಿಕೊಳ್ಳಬೇಕು. ಸಮಾಜದ ಪ್ರತಿಯೊಬ್ಬರಿಗೂ ನೆರವಾಗುವ ನಿಟ್ಟಿನಲ್ಲಿ ಈ ಕೇಂದ್ರ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ದೊರೆಕೆರೆ, ಹೊಸಕೊಪ್ಪಲು, ರಾಮನಾಥತುಂಗಾ, ಸುಂಡವಾಳು ಹಾಗೂ ನಂದಿಪುರ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಸ್ಥರ ಕುಂದುಕೊರತೆಗಳನ್ನು ಆಲಿಸಿದರು. ಗ್ರಾಮಗಳಲ್ಲಿನ ಮೂಲಭೂತ ಸೌಕರ್ಯಗಳ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲು ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹೊಸಕೊಪ್ಪಲು ಗ್ರಾಮದ ರೈತ ಸಂಘದ ಸದಸ್ಯ ಸುಬ್ಬೇಗೌಡ ಅವರು ಗ್ರಾಮಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಹಕಾರ ನೀಡುವುದರ ಜತೆಗೆ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ಸೌಲಭ್ಯ ಕಲ್ಪಿಸುವಂತೆ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟರು.

ಇದಕ್ಕೆ ಪ್ರತಿಕ್ರಿಯಿಸಿದ ಬಾಬಣ್ಣ ಅವರು, "ಸಮಾಜ ಸೇವೆಯ ಉದ್ದೇಶದಿಂದಲೇ ಈ ತಾಲೂಕಿಗೆ ಬಂದಿದ್ದೇನೆ. ಸಾರ್ವಜನಿಕರ ಸಮಸ್ಯೆಗಳಿಗೆ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಸ್ಪಂದಿಸಲು ಪ್ರಾಮಾಣಿಕವಾಗಿ ಸಹಕರಿಸುತ್ತೇನೆ" ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗಣೇಶ್ ಹರಿಲಾಪುರ, ಶೇಖರ್ ತಾತನಹಳ್ಳಿ, ಟೈಲರ್ ಗಣೇಶ್, ಟಿ.ಟಿ. ಗೋವಿಂದ, ಶಶಿಕುಮಾರ್, ದೇಪುರ್ ಕರೀಗೌಡ, ಮಹದೇವ್, ತಾತನಹಳ್ಳಿ ಕುಮಾರ್, ತಾತನಹಳ್ಳಿ ಮಹೇಶ್, ಪದ್ಮನಾಭ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪಿರಿಯಾಪಟ್ಟಣ: ಪಟ್ಟಣದ ಬೆಟ್ಟದಪುರ ರಸ್ತೆಯಲ್ಲಿರುವ ಶ್ರೀ ಸಾಯಿ ಸಮುದಾಯ ಭವನದ ಹಿಂಭಾಗದಲ್ಲಿ ಸಮಾಜ ಸೇವಾ ರತ್ನ ಬಿ.ಬಿ.ಆರ್. ನರೇಂದ್ರ ಬಾಬಣ್ಣ ಅವರ ನೂತನ ಸಮಾಜ ಸೇವಾ ಕೇಂದ್ರದ ಕಚೇರಿಯನ್ನು ಸೋಮವಾರ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಬಿ.ಆರ್. ನರೇಂದ್ರ ಬಾಬಣ್ಣ ಅವರು, "ನಾನು ಮೂಲತಃ ಬೆಂಗಳೂರಿನ ಆನೇಕಲ್ ಗ್ರಾಮದವನಾಗಿದ್ದು, ಕಳೆದ 19 ವರ್ಷಗಳಿಂದ ಪಿರಿಯಾಪಟ್ಟಣ ತಾಲೂಕಿನ ಜನರೊಂದಿಗೆ ಒಡನಾಟ ಹೊಂದಿದ್ದೇನೆ. ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶದಿಂದ ಈ ಕಚೇರಿಯನ್ನು ಆರಂಭಿಸಿದ್ದೇನೆ. ಸಾರ್ವಜನಿಕರು ಯಾವುದೇ ಸಂದರ್ಭದಲ್ಲಿ ತಮ್ಮ ಕಷ್ಟ-ಕಾರ್ಪಣ್ಯಗಳನ್ನು ತಿಳಿಸಲು ಕಚೇರಿಗೆ ಆಗಮಿಸಿ ನನ್ನನ್ನು ಸಂಪರ್ಕಿಸಬಹುದು. ಜನರ ಸೇವೆ ಹಾಗೂ ಸಹಕಾರಕ್ಕೆ ನಾನು ಸದಾ ಸಿದ್ಧನಿದ್ದೇನೆ" ಎಂದರು.

ತಾಲೂಕಿನ ಜನರಲ್ಲಿ ಜಾತಿ, ಭೇದ, ಮೇಲು-ಕೀಳು ಎಂಬ ಭಾವನೆಗಳಿಗೆ ಅವಕಾಶ ನೀಡದೆ, ನಾವೆಲ್ಲರೂ ಒಂದೇ ಎಂಬ ಸಹೋದರತ್ವದ ಮನೋಭಾವ ಬೆಳೆಸಿಕೊಳ್ಳಬೇಕು. ಸಮಾಜದ ಪ್ರತಿಯೊಬ್ಬರಿಗೂ ನೆರವಾಗುವ ನಿಟ್ಟಿನಲ್ಲಿ ಈ ಕೇಂದ್ರ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ಕಚೇರಿ ಉದ್ಘಾಟನೆಯ ಬಳಿಕ ತಾಲೂಕಿನ ದೊರೆಕೆರೆ, ಹೊಸಕೊಪ್ಪಲು, ರಾಮನಾಥತುಂಗಾ, ಸುಂಡವಾಳು ಹಾಗೂ ನಂದಿಪುರ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಸ್ಥರ ಕುಂದುಕೊರತೆಗಳನ್ನು ಆಲಿಸಿದರು. ಗ್ರಾಮಗಳಲ್ಲಿನ ಮೂಲಭೂತ ಸೌಕರ್ಯಗಳ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲು ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹೊಸಕೊಪ್ಪಲು ಗ್ರಾಮದ ರೈತ ಸಂಘದ ಸದಸ್ಯ ಸುಬ್ಬೇಗೌಡ ಅವರು ಗ್ರಾಮಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಹಕಾರ ನೀಡುವುದರ ಜತೆಗೆ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ಸೌಲಭ್ಯ ಕಲ್ಪಿಸುವಂತೆ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟರು.

ಈ ಸಂದರ್ಭದಲ್ಲಿ ಗಣೇಶ್ ಹರಿಲಾಪುರ, ಶೇಖರ್ ತಾತನಹಳ್ಳಿ, ಟೈಲರ್ ಗಣೇಶ್, ಟಿ.ಟಿ. ಗೋವಿಂದ, ಶಶಿಕುಮಾರ್, ದೇಪುರ್ ಕರೀಗೌಡ, ಮಹದೇವ್, ತಾತನಹಳ್ಳಿ ಕುಮಾರ್, ತಾತನಹಳ್ಳಿ ಮಹೇಶ್, ಪದ್ಮನಾಭ ಸೇರಿದಂತೆ ಹಲವರು ಉಪಸ್ಥಿತರಿದ್ದರು.

— Vasanthakumar C S

LOCAL

ಝಳಕಿಯಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪನೆಗೆ ರೈತರು, ಸಾರ್ವಜನಿಕರ ಆಗ್ರಹ



ಝಳಕಿ ಗ್ರಾಮವು ಚಡಚಣ ಮತ್ತು ಇಂಡಿ ತಾಲೂಕುಗಳ ಮಧ್ಯಭಾಗದಲ್ಲಿರುವುದರಿಂದ, ಇಲ್ಲಿನ ಜಮೀನುಗಳಲ್ಲಿ ಅಥವಾ ಯಾವುದೇ ಸ್ಥಳಗಳಲ್ಲಿ ಅಗ್ನಿ ಅವಘಡ ಸಂಭವಿಸಿದರೆ, ಇಂಡಿಯಿಂದ ಅಗ್ನಿಶಾಮಕ ವಾಹನ ಬರಲು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಝಳಕಿ ಗ್ರಾಮವು ಎರಡು ತಾಲೂಕುಗಳ ವ್ಯಾಪ್ತಿಯಲ್ಲಿರುವುದರಿಂದ, ಇಲ್ಲಿ ಅಗ್ನಿಶಾಮಕ ಠಾಣೆಯನ್ನು ನಿರ್ಮಿಸಿದರೆ ಈ ಭಾಗದ ಜನರಿಗೆ ಅನುಕೂಲವಾಗಲಿದೆ ಎಂದು ನೀಲಕಂಠ ರೂಗಿ ಅವರು ಹೇಳಿದ್ದಾರೆ.

ಈಗಾಗಲೇ ಹಲವಾರು ಕಬ್ಬಿನ ಗದ್ದೆಗಳು, ಮನೆಗಳು ಮತ್ತು ಹೆದ್ದಾರಿಯಲ್ಲಿ ವಾಹನಗಳು ಬೆಂಕಿಗೆ ಆಹುತಿಯಾಗಿವೆ. ಇಂತಹ ಘಟನೆಗಳು ನಡೆದ ತಕ್ಷಣ ಸಮೀಪದಿಂದಲೇ ಅಗ್ನಿಶಾಮಕ ವ್ಯವಸ್ಥೆ ಲಭ್ಯವಿದ್ದರೆ, ದೊಡ್ಡ ಅನಾಹುತಗಳನ್ನು ತಡೆಯಬಹುದು. ಇದರಿಂದ ರೈತರು ಮತ್ತು ಸಾರ್ವಜನಿಕರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗುತ್ತದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರವು ಕೂಡಲೇ ಸ್ಪಂದಿಸಿ ಝಳಕಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಬೇಕು ಎಂದು ರೈತರು ಮತ್ತು ಸಾರ್ವಜನಿಕರ ಪರವಾಗಿ ಪ್ರಕಟಣೆ ಮೂಲಕ ಮನವಿ ಮಾಡಲಾಗಿದೆ.

— YALLAPPA RAGATE (PATIL)

LOCAL

ಝಳಕಿ ಗ್ರಾಮದಲ್ಲಿ ಅಗ್ನಿಶಾಮಕ ಕಚೇರಿ ಸ್ಥಾಪನೆಗೆ ತುರ್ತು ಬೇಡಿಕೆ



ಝಳಕಿ ಗ್ರಾಮ, ಇಂಡಿ ತಾಲ್ಲೂಕಿನ ಮಧ್ಯಭಾಗದಲ್ಲಿ ಮತ್ತು ಎರಡು ತಾಲ್ಲೂಕಿನ ಗಡಿಯಲ್ಲಿ ಇರುವುದರಿಂದ, ಇಲ್ಲಿ ಸಂಭವಿಸುವ ಅಗ್ನಿ ಅಪಘಾತಗಳಿಗೆ ಪ್ರಸ್ತುತ ದೂರದ ಅಗ್ನಿಶಾಮಕ ಘಟಕಗಳಿಂದ ತ್ವರಿತ ಸಹಾಯ ದೊರೆಯುವುದಿಲ್ಲ. ಇದನ್ನು ಗಮನಿಸಿ, ಗ್ರಾಮಸ್ಥರು ತಕ್ಷಣದ ಅಗ್ನಿಶಾಮಕ ಕಚೇರಿ ನಿರ್ಮಾಣಕ್ಕೆ ಸರ್ಕಾರವನ್ನು ವಿನಂತಿಸಿದ್ದಾರೆ.

ಹಾಗೂ ಹೆದ್ದಾರಿ ಮೇಲೆ ಕಾರು, ಲಾರಿಗಳು ಹತ್ತಿ ಉರಿದಿರುವ ಅನೇಕ ಘಟನೆಗಳು ಸಂಭವಿಸಿದ್ದವು. ಈ ರೀತಿಯ ಘಟನೆಗಳು ಜನರ ಜೀವ, ಆಸ್ತಿ ಹಾಗೂ ರೈತರ ಆರ್ಥಿಕ ಸ್ಥಿತಿಗೆ ಗಂಭೀರ ಹಾನಿ ಉಂಟುಮಾಡುತ್ತಿವೆ.

ಸ್ಥಳೀಯ ಅಗ್ನಿಶಾಮಕ ಕಚೇರಿ ಸ್ಥಾಪನೆಯಿಂದ ಈ ಪ್ರದೇಶದ ಜನರಿಗೆ ತ್ವರಿತ ಪ್ರತಿಕ್ರಿಯೆ ಸಾಧ್ಯವಾಗುತ್ತದೆ, ಇದರಿಂದ ಅಗ್ನಿ ಅನಾಹುತಗಳ ಪ್ರಮಾಣವನ್ನು ಕಡಿಮೆ ಮಾಡಬಹುದು ಹಾಗೂ ರೈತರ ಉತ್ಪಾದನೆ ಮತ್ತು ಸಾರ್ವಜನಿಕರ ಸುರಕ್ಷತೆಯನ್ನು ರಕ್ಷಿಸಬಹುದು.

ರೈತರ, ಸಾರ್ವಜನಿಕರ ಪರವಾಗಿ ಗ್ರಾಮಸ್ಥರು ಪ್ರಕಟಣೆ ಮೂಲಕ ಸರ್ಕಾರಕ್ಕೆ ಮನವಿ ಮಾಡಿದ್ದು, ಈ ಬೇಡಿಕೆಗೆ ಶೀಘ್ರದಲ್ಲಿ ಸ್ಪಂದಿಸಿ, ಅಗ್ನಿಶಾಮಕ ಕಚೇರಿ ನಿರ್ಮಾಣ ಪ್ರಕ್ರಿಯೆಯನ್ನು ಆರಂಭಿಸಬೇಕೆಂದು ವಿನಂತಿಸಿದ್ದಾರೆ.

— YALLAPPA RAGATE (PATIL)

LOCAL

ಉಪರಹಳ್ಳಿ ರಸ್ತೆಯಲ್ಲಿ ಗಟರ್ ಕೆಲಸದ ವೇಳೆ ಪ್ರಯಾಣಿಕರಿಗೆ ತೊಂದರೆ, ವಿಡಿಯೋ ವೈರಲ್



ಉಪರಹಳ್ಳಿ ರಸ್ತೆಯಲ್ಲಿ ಗಟರ್ ನಿರ್ಮಾಣ ಕೆಲಸ ನಡೆಯುತ್ತಿತ್ತು. ಕೆಲಸದ ಸಮಯದಲ್ಲಿ ತೆಗೆದುಕೊಳ್ಳಲಾದ ಕೆಲವು ಕ್ರಮಗಳು ರಸ್ತೆ ಬಳಕೆದಾರರಿಗೆ ಅಸೌಕರ್ಯ ಉಂಟುಮಾಡಿದವು.

ಪ್ರಯಾಣಿಕರು ಕೆಲಸದ ಪ್ರಭಾವದಿಂದ ತೊಂದರೆ ಅನುಭವಿಸುತ್ತಿರುವುದನ್ನು ಸ್ಥಳದಲ್ಲಿರುವ ಜನರು ಗಮನಿಸಿ, ಈ ಘಟನೆಯನ್ನು ಎರಡೂ ಬದಿಗಳಿಂದ ವೀಡಿಯೊ ರೂಪದಲ್ಲಿ ದಾಖಲಿಸಿದರು.

ಆ ವೀಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳಲ್ಪಟ್ಟಿದ್ದು, ಶೀಘ್ರದಲ್ಲೇ ವೈರಲ್ ಆಗಿ ವ್ಯಾಪಕ ಗಮನ ಸೆಳೆದಿವೆ.

— SHAIJAHAN

SPORTS

ದಕ್ಷಿಣ ಆಫ್ರಿಕಾ ಟೆಸ್ಟ್ ಸರಣಿಗೆ ಇಂಗ್ಲೆಂಡ್ ತಂಡದಲ್ಲಿ ಯುವ ಓಪನರ್ ಬೆನ್ ಮೆಕಿನ್ನಿ ಆಯ್ಕೆ



ಇಂಗ್ಲೆಂಡ್ ಟೆಸ್ಟ್ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ನಡೆಯುವ ಟೆಸ್ಟ್ ಸರಣಿಗೆ ಯುವ ಓಪನರ್ ಬೆನ್ ಮೆಕಿನ್ನಿಯನ್ನು ಮೊದಲ ಬಾರಿಗೆ ಆಯ್ಕೆ ಮಾಡಿದೆ. ಈ ಆಯ್ಕೆ ತಂಡದ ಇತ್ತೀಚಿನ ತಂಡ ಸಂಯೋಜನೆಗೆ ಹೊಸ ಶಕ್ತಿಯನ್ನು ಸೇರಿಸುವ ಉದ್ದೇಶದಿಂದ ಮಾಡಲಾಗಿದೆ.

ಜೇಕಬ್ ಬೆಥೆಲ್ ಗಾಯಗೊಂಡಿರುವ ಕಾರಣದಿಂದ, ತಂಡದಲ್ಲಿ ಅವನ ಸ್ಥಾನ ಖಾಲಿಯಾಗಿದ್ದು, ಅದನ್ನು ಭರ್ತಿಮಾಡಲು ಮೆಕಿನ್ನಿ ಆಯ್ಕೆಯಾದರು. ಬೆಥೆಲ್ ಗಾಯದ ವಿವರಗಳು ಇನ್ನೂ ಸ್ಪಷ್ಟವಾಗಿಲ್ಲ, ಆದರೆ ಅವನ ಅಸಮರ್ಥತೆಯಿಂದ ತಂಡದ ಆರಂಭಿಕ ಕ್ರಮದಲ್ಲಿ ಬದಲಾವಣೆ ಅಗತ್ಯವಾಯಿತು.

ಆಟಗಾರನಾಗಿದ್ದು, ಇಂಗ್ಲೆಂಡ್ ತಂಡದಲ್ಲಿ ಓಪನರ್ ಸ್ಥಾನದಲ್ಲಿ ಪ್ರಾಥಮಿಕ ಅನುಭವವನ್ನು ಗಳಿಸಲು ಈ ಅವಕಾಶವನ್ನು ಸ್ವೀಕರಿಸುತ್ತಾನೆ. ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಅವನ ಪ್ರದರ್ಶನ ತಂಡದ ಭವಿಷ್ಯದ ಆಯ್ಕೆಗಳಿಗೆ ಮಹತ್ವದ ಸೂಚಕವಾಗಲಿದೆ.

ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಈ ಆಯ್ಕೆಯನ್ನು ತಂಡದ ದೀರ್ಘಕಾಲೀನ ಅಭಿವೃದ್ಧಿ ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಹಂತವಾಗಿ ಪರಿಗಣಿಸಿದೆ. ಮೆಕಿನ್ನಿಯ ಪ್ರದರ್ಶನ ಮತ್ತು ತಂಡದ ಸಮಗ್ರ ಕಾರ್ಯಕ್ಷಮತೆಯ ಮೇಲೆ ಗಮನ ನೀಡಲಾಗುತ್ತದೆ.

— Ganesh S

SPORTS

ಬಾಂಗ್ಲಾದೇಶ ವಿರುದ್ಧದ 2ನೇ ಟೆಸ್ಟ್: ದಕ್ಷಿಣ ಆಫ್ರಿಕಾ ಪ್ಲೇಯಿಂಗ್-11 ಪ್ರಕಟ, ಮಾರ್ಕ್ರಾಮ್ ನಾಯಕ



ಸೆಂಚುರಿಯನ್‌ನಲ್ಲಿ ಇಂದು ಮಧ್ಯಾಹ್ನ 1:30ಕ್ಕೆ ಆರಂಭವಾಗಲಿರುವ ಬಾಂಗ್ಲಾದೇಶ ವಿರುದ್ಧದ 2ನೇ ಟೆಸ್ಟ್ ಪಂದ್ಯಕ್ಕೆ ದಕ್ಷಿಣ ಆಫ್ರಿಕಾ ತಂಡದ ಆಡುವ 11ರ ಬಳಗವನ್ನು ಪ್ರಕಟಿಸಲಾಗಿದೆ. ಏಡೆನ್ ಮಾರ್ಕ್ರಾಮ್ ತಂಡದ ನಾಯಕತ್ವ ವಹಿಸಲಿದ್ದಾರೆ.

ಈ ಪಂದ್ಯದಲ್ಲಿ ಟೋನಿ ಡಿ ಜಾರ್ಜಿ ಮತ್ತು ವೇಗಿ ಅನ್ರಿಚ್ ನಾರ್ಟ್ಜೆ ಅವರು ದಕ್ಷಿಣ ಆಫ್ರಿಕಾ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇದು ತಂಡಕ್ಕೆ ಬಲ ತುಂಬುವ ನಿರೀಕ್ಷೆಯಿದೆ.

ಈ ಪಂದ್ಯವು ಸೆಂಚುರಿಯನ್‌ನಲ್ಲಿ ನಡೆಯಲಿದ್ದು, ಮಧ್ಯಾಹ್ನ 1:30ಕ್ಕೆ ಆರಂಭವಾಗಲಿದೆ. ಉಭಯ ತಂಡಗಳು ಗೆಲುವಿಗಾಗಿ ಸೆಣಸಾಡಲಿವೆ.

— Ganesh S

LOCAL

ರಾಮಾಯಣ: ಭಾಗ 1 18 ದಿನಗಳಲ್ಲಿ ₹1,693.50 ಕೋಟಿ ಗ್ರಾಸ್ ಕಲೆಕ್ಷನ್



18 ದಿನಗಳಲ್ಲೇ 'ರಾಮಾಯಣ: ಭಾಗ 1' ಚಿತ್ರವು ಭಾರತದಲ್ಲಿ ₹942.75 ಕೋಟಿ ನೆಟ್ ಹಾಗೂ ವಿಶ್ವದಾದ್ಯಂತ ₹1,693.50 ಕೋಟಿ ಗ್ರಾಸ್ ಕಲೆಕ್ಷನ್ ಮಾಡಿ, ಎಲ್ಲ ಕಾಲದ ದಾಖಲೆಯತ್ತ ಮುನ್ನಡೆಯುತ್ತಿದೆ.

'ರಾಮಾಯಣ: ಭಾಗ 1' 3ನೇ ಶನಿವಾರ ₹35.60 ಕೋಟಿ ನೆಟ್ ಕಲೆಕ್ಷನ್ ಮಾಡಿದೆ, ಇದು ಚಿತ್ರದ ಬಾಕ್ಸ್ ಆಫೀಸ್ ಪ್ರದರ್ಶನವನ್ನು ಮತ್ತಷ್ಟು ದೃಢಪಡಿಸಿದೆ.

ಚಿತ್ರದಲ್ಲಿ ರನ್‌ಬೀರ್ ಕಪೂರ್, ಯಶ್ ಮತ್ತು ಸಾಯಿ ಪಲ್ಲವಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ, ಇದು ಕನ್ನಡ ಸಿನೆಮಾ ಪ್ರೇಕ್ಷಕರಲ್ಲಿ ದೊಡ